ಸಂಪುಟ : 11 ಸಂಚಿಕೆ: 57 ಪುಟ : 4+2 ಬೆಲೆ: 3.00 ಬುಧವಾರ ಎಪ್ರಿಲ್ 01 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ

Volume : 11 Issue : 57 Pages : 4+2 Price : 3.00 Wednesday April 01 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಇಂದು ವಿಶ್ವ ಜಲ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಜಲ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಎಪ್ರಿಲ್ 1ರಂದು ಬೆಳಿಗ್ಗೆ 10 ಗಂಟೆಗೆ ಗದಗ ಜಿಲ್ಲಾ ನ್ಯಾಯಾಲಯದ ಎರಡನೇ ಮಹಡಿಯ ವಿ.ಸಿ. ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ನಾಗವೇಣಿ ಉದ್ಘಾಟಿಸಲಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಆರ್.ಜಿ. ಕಲ್ಲೂರ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಗಂಗಾಧರ ಸಿ.ಎಂ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕು. ಗೀತಾ ಶಿಂಧೆ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ ಗಿರಿಮಲ್ಲಪ್ಪ ಆರ್. ಶೆಟ್ಟರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್. ಶಿವನಗೌಡ್ರ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಪದ್ಮಶ್ರೀ ಆರ್. ಪಾಟೀಲ, ಪ್ರಥಮ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಶಿಲ್ಪಾ ತಿಮ್ಮಾಪುರ ಹಾಗೂ ದ್ವಿತೀಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಬೀರಪ್ಪ ಕಾಂಬಳೆ ಭಾಗವಹಿಸಲಿದ್ದಾರೆ.

ಇದಲ್ಲದೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ವಸಂತ ಮಡ್ಲೂರ, ವಾಟರ್ ಫಾರ್ ವಾಯ್ಸ್‌ಲೆಸ್ ಸಂಸ್ಥೆಯ ಸಂಸ್ಥಾಪಕರಾದ ಜೈನ್ ಸನ್ನಿ ಹಸ್ತಿಮಲ್, ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾದ ಶ್ರೀಮತಿ ಖಿಮಿ ಸನ್ನಿ ಜೈನ್ ಹಾಗೂ ಅರಿಹಂತ ಸುರೇಶ್ ಕುಮಾರ್ ಜೈನ್ ಉಪಸ್ಥಿತರಿರುವರು.

### ನಾಗಕುಂಡ ಬಾವಿ ಸಂರಕ್ಷಣೆ ಕಾಮಗಾರಿಯ ಲೋಕಾರ್ಪಣೆಗೊಳಿಸಿದ ಸಚಿವ ಡಾ. ಹೆಚ್.ಕೆ ಪಾಟೀಲ

# ಪರಂಪರೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಚಾಲುಕ್ಯರ ಕಾಲದ ಇತಿಹಾಸ ಪ್ರಸಿದ್ಧ ನಾಗಕುಂಡ ಬಾವಿಯು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕವಾಗಿದ್ದು, ಗ್ರಾಮೀಣ ಜೀವನದ ನಂಬಿಕೆಗಳು ಹಾಗೂ ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತದೆ. ಇಂತಹ ಐತಿಹಾಸಿಕ ಪರಂಪರೆಯನ್ನು ಉಳಿಸಿ ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಕೆ. ಪಾಟೀಲ್ ಹೇಳಿದರು.

ತಾಲೂಕಿನ ಸೂಡಿ ಗ್ರಾಮದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಪ್ರವಾಸೋದ್ಯಮ ಇಲಾಖೆ ಹಾಗೂ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಸಂಯುಕ್ತವಾಗಿ ಕೈಗೊಂಡ ನಾಗಕುಂಡ ಬಾವಿಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.




ವರ್ಷಗಳ ನಿರ್ಲಕ್ಷ್ಯದಿಂದ ಹಾನಿಗೊಳಗಾಗಿದ್ದ ಈ ಬಾವಿಯನ್ನು ಮೂಲ ಸ್ವರೂಪವನ್ನು ಉಳಿಸಿಕೊಂಡೇ ಪುನರುಜ್ಜೀವನಗೊಳಿಸುವ ಮಹತ್ವಾಕಾಂಕ್ಷಿ ಯೋಜನೆ ಕೈಗೊಳ್ಳಲಾಗಿದೆ. ಬಾವಿಯ ಸ್ವಚ್ಛತೆ, ರಚನಾತ್ಮಕ ಬಲವರ್ಧನೆ, ಸುತ್ತಮುತ್ತಲಿನ ಪ್ರದೇಶದ ಸುಂದರೀಕರಣ ಹಾಗೂ ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳ ಅಭಿವೃದ್ಧಿ ಸೇರಿದಂತೆ ಹಲವು ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಇದರಿಂದ ನಾಗಕುಂಡ ಬಾವಿ ಮತ್ತೊಮ್ಮೆ ಪ್ರಮುಖ ಪ್ರವಾಸಿ ತಾಣವಾಗಿ ರೂಪುಗೊಳ್ಳಲಿದೆ ಎಂದು ಹೇಳಿದರು.

ಶಾಸಕ ಜಿ.ಎಸ್. ಪಾಟೀಲ್ ಮಾತನಾಡಿ, ಪರಂಪರಾ ತಾಣಗಳ ಸಂರಕ್ಷಣೆ ನಮ್ಮ ಸಂಸ್ಕೃತಿಯ ಉಳಿವಿಗೆ ಅತ್ಯಂತ ಅಗತ್ಯವಾಗಿದೆ. ಇಂತಹ ಯೋಜನೆಗಳು ಸ್ಥಳೀಯ ಆರ್ಥಿಕತೆಗೆ ಬಲ ನೀಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡುತ್ತವೆ ಎಂದು ಹೇಳಿದರು.

ಆಧುನೀಕರಣ ಮತ್ತು ನಗರೀಕರಣದ ನಡುವೆಯೂ ಪರಂಪರಾ ತಾಣಗಳ ಸಂರಕ್ಷಣೆ ಅತ್ಯಂತ ಪ್ರಮುಖವಾಗಿದ್ದು, ಇವು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯ ಜೀವಂತ ಸಾಕ್ಷಿಗಳಾಗಿವೆ. ಗಜೇಂದ್ರಗಡ, ಇಟಗಿ, ಸವಡಿ ಮತ್ತು ಸೂಡಿ ಗ್ರಾಮಗಳಲ್ಲಿ ಇರುವ ಇತಿಹಾಸ ಪ್ರಸಿದ್ಧ ಕಟ್ಟಡಗಳು, ದೇವಾಲಯಗಳು ಹಾಗೂ ಸ್ಮಾರಕಗಳು ಕ್ರಮೇಣ ನಾಶವಾಗುತ್ತಿರುವುದು ಕಳವಳಕಾರಿ ಸಂಗತಿ ಎಂದು ಹೇಳಿದರು.

> "ಸೂಡಿ ಉತ್ಸವವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬದಲಾಗಿ ಪ್ರವಾಸೋದ್ಯಮ ಇಲಾಖೆಯ ಮೂಲಕ ಆಯೋಜಿಸಿದರೆ, ಸ್ಥಳೀಯ ಜನರು ಹಾಗೂ ಜನಪ್ರತಿನಿಧಿಗಳ ದೀರ್ಘಕಾಲದ ಬೇಡಿಕೆ ಈಡೇರಲಿದೆ."
>
> **– ಜಿ.ಎಸ್. ಪಾಟೀಲ್, ಶಾಸಕ.**

ಸರ್ಕಾರ ಮತ್ತು ಸಾರ್ವಜನಿಕರು ಒಗ್ಗೂಡಿ ಈ ತಾಣಗಳ ಸಂರಕ್ಷಣೆಗೆ ಮುಂದಾಗಬೇಕು ಎಂದು ಅವರು ಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್, ಶ್ರೀಮತಿ ರಾಜಶ್ರೀ ಪಿನ್ನಮನೇನಿ, ಡಾ. ದೇವಿನೇನಿ ಸುಬ್ಬರಾವ್, ಬಿ.ವಿ. ಪಾಪಾರಾವ್, ವೀರಣ್ಣ ಶೆಟ್ಟರ, ಮಿಥುನ್ ಪಾಟೀಲ್, ಮಲ್ಲಿಕಾರ್ಜುನ ಬಿದರೂರ, ಸಂಗಮೇಶ ಅಬ್ಬಿಗೇರಿ, ಸಿದ್ದಣ್ಣ ಬಂಡಿ, ಅನ್ವರಸಾಬ ಇಟಗಿ, ಶಶಿಧರ ವಕ್ಕಲರ, ಬಸವರಾಜ ಶಿರೋಳ, ಬಸವರಾಜ ಕಡಬಿನ, ರಾಘವೇಂದ್ರ ಕುಲಕರ್ಣಿ, ಬಸವರಾಜ ನವಲಗುಂದ, ಶರೀಫ್ ಡಾಲಾಯತ, ಚಂದ್ರಶೇಖರ ಕಂದಕೂರ, ಸಿಪಿಐ ವಿಜಯಕುಮಾರ ನಾಯಕ, ಪಿಎಸ್‌ಐ ಪ್ರಕಾಶ್ ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಶಾಸಕ ನೇಮಿರಾಜ್ ನಾಯ್ಕ

# ಅಂಬೇಡ್ಕರ್ ಸಂವಿಧಾನದಿಂದ ಸರ್ವರಿಗೂ ಅಸ್ತಿತ್ವ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಅಂಬೇಡ್ಕರ್ ನೀಡಿದ ಸಂವಿಧಾನದಿಂದ ದೇಶದ ಪ್ರತಿಯೊಬ್ಬರಿಗೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಇಲ್ಲದಿದ್ದರೆ ಬಲಿಷ್ಠ ಶಕ್ತಿಗಳ ಕೈಯಲ್ಲಿ ಬಡವರ ಬದುಕು ಬರ್ಬರವಾಗಿರುತ್ತಿತ್ತು ಎಂದು ಶಾಸಕ ಕೆ. ನೇಮಿರಾಜ್ ನಾಯ್ಕ ಹೇಳಿದರು.

ಅವರು, ಪಟ್ಟಣದ ತಾಲೂಕು ಪಂಚಾಯತ್ ಕಚೇರಿಯಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

**ಮುಖ್ಯಾಧಿಕಾರಿ–ದಲಿತ ನಾಯಕರ ನಡುವೆ ಜಟಾಪಟಿ**

ಹಳೆಯ ಅಂಬೇಡ್ಕರ್ ವೃತ್ತ ಹಾಗೂ ಫಾರಂ–3 ಸಂಬಂಧಿತ ವಿಷಯದ ಬಗ್ಗೆ ಮುಖ್ಯಾಧಿಕಾರಿ ಮುಗಳಿ ಹಾಗೂ ದಲಿತ ನಾಯಕರ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆಯಿತು. ಈ ವೇಳೆ ಶಾಸಕ ನೇಮಿರಾಜ ನಾಯ್ಕ ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ಸಮಾಧಾನಗೊಳಿಸಿದರು.

ಜಯಂತಿ ಸಂದರ್ಭದಲ್ಲಿ ಎಲ್ಲಾ ಸಮುದಾಯದ ಮುಖಂಡರಿಗೆ ಅವಕಾಶ ನೀಡಬೇಕು. ಇದರಿಂದ ಸಮಾಜದಲ್ಲಿ ಸೌಹಾರ್ದತೆ ಹೆಚ್ಚುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ಹಿಂದಿನ ಅಂಬೇಡ್ಕರ್ ವೃತ್ತವನ್ನು ಯಾರೂ ಕಬಳಿಸಲು ಸಾಧ್ಯವಿಲ್ಲ. ಈಗ ಗುರುತಿಸಿದ ಜಾಗದಲ್ಲೇ ಅಂಬೇಡ್ಕರ್ ವೃತ್ತ ನಿರ್ಮಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ದಲಿತ ನಾಯಕರು ಮಾತನಾಡಿ, ಅಂಬೇಡ್ಕರ್ ಕುರಿತು ಉಪನ್ಯಾಸವನ್ನು ತಾಲೂಕು ಅಧ್ಯಕ್ಷ ದೊಡ್ಡಬಸಪ್ಪ ಗದ್ದಿಕೇರಿ ನೀಡಬೇಕು ಎಂದು ಸೂಚಿಸಿದರು. ಮತ್ತೊಬ್ಬ ನಾಯಕ ಎ. ಮಹೇಶ್ ಅವರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಪೂರ್ಣವಾಗಿರುವ ಅಂಬೇಡ್ಕರ್ ಭವನಗಳನ್ನು ಪೂರ್ಣಗೊಳಿಸಬೇಕು ಎಂದು ಮನವಿ ಮಾಡಿದರು.

ಒಟ್ಟಾರೆ ಈ ಬಾರಿ ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ನಿರ್ಧಾರ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಪ್ರಭಾರಿ ತಹಸೀಲ್ದಾರ್ ಶಿವಕುಮಾರ್ ಗೌಡ, ಸಮಾಜ ಕಲ್ಯಾಣ ಇಲಾಖೆಯ ಜಗದೀಶ್ ಉಪಸ್ಥಿತರಿದ್ದರು.

**ಸಭೆಯ ಪ್ರಮುಖ ನಿರ್ಣಯಗಳು**

1)ಮೆರವಣಿಗೆ ವೇಳೆ ರಸ್ತೆಗಳ ಮೇಲೆ ನೀರು ಸಿಂಪಡಿಸಲು ಪುರಸಭೆಗೆ ಸೂಚನೆ
2)ಕುಡಿಯುವ ನೀರಿನ ವ್ಯವಸ್ಥೆಯನ್ನು ರೆಡ್ಡಿ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ರೆಡ್ಡಿ ವಹಿಸಿಕೊಳ್ಳಲು ಒಪ್ಪಿಗೆ
3)ನಾಡಗೀತೆ, ರೈತಗೀತೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ
4)ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿಯ ಮೂವರು ವಿದ್ಯಾರ್ಥಿಗಳಿಗೆ ಸನ್ಮಾನ
5)ಡಿಜೆ ಬಳಕೆ ಸಂಸ್ಕೃತಿಗೆ ವಿರುದ್ಧವಾಗಿದ್ದು ಅನುಮತಿ ಇಲ್ಲ ಎಂದು ಶಾಸಕ ಸ್ಪಷ್ಟನೆ
6)ಮೆರವಣಿಗೆಯಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ತರಲು ನಿರ್ಧಾರ
7)ಬಿಸಿಗಾಳಿ ಹಿನ್ನೆಲೆ ಮಜ್ಜಿಗೆ ವಿತರಣೆ ವ್ಯವಸ್ಥೆ
8)ಕಾರ್ಯಕ್ರಮ ನಿರೂಪಣೆಯನ್ನು ಇಲಾಖೆಯವರಿಂದಲೇ ನಡೆಸಲು ತೀರ್ಮಾನ

ಸಭೆಯ ನಡವಳಿಗಳನ್ನು ಅಧೀಕ್ಷಕಿ ಶೋಭಾ ಓದಿದರು. ಸ್ವಾಗತ ಹಾಗೂ ವಂದನಾರ್ಪಣೆಯನ್ನು ಹಿರಿಯ ನಿಲಯ ಪಾಲಕ ಬಿ. ನಾಗರಾಜ್ ನೆರವೇರಿಸಿದರು.

▸▸2ನೇ ಪುಟಕ್ಕೆ

## ಶಿರಹಟ್ಟಿ: ಆಕ್ಷೇಪಣೆಗೆ ಅವಕಾಶ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರ ಗಮನಕ್ಕೆ, ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ವಿವಿಧ ಉದ್ದೇಶಗಳಿಗೆ ಹಂಚಿಕೆ ಮಾಡುವ ಪ್ರಸ್ತಾವಕ್ಕೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ವಾರ್ಡ್ ನಂ. 03ರಲ್ಲಿ ಹಳೆ ನೀರಿನ ಟ್ಯಾಂಕ್ ಹತ್ತಿರದ ಆಸ್ತಿ ಸಂಖ್ಯೆ 2/101 (30x40 ಮೀಟರ್) ಪ್ರದೇಶವನ್ನು ಪತ್ರಿಕಾ ಭವನ ನಿರ್ಮಾಣಕ್ಕಾಗಿ ಶಿರಹಟ್ಟಿ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನೀಡಲು ದಿ. 17–03–2026ರಂದು ನಡೆದ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ.

ಇದೇ ರೀತಿ ವಾರ್ಡ್ ನಂ. 16ರಲ್ಲಿ ಪ್ರಕಾಶ ಶಿವಪ್ಪ ಮಾನೇದ ಅವರ ಲೇಔಟ್‌ನ ಪ್ಲಾಟ್ ನಂ. 36 (621 ಚದರ ಮೀಟರ್) ನಿವೇಶನವನ್ನು ಸತೀಶ ಜಾರಕಿಹೊಳಿ ಮಾನವ ಬಂಧುತ್ವ ಸೇವಾ ಟ್ರಸ್ಟ್ ವತಿಯಿಂದ ಶಿಕ್ಷಣ ಸಂಸ್ಥೆ ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಆರಂಭಿಸಲು ಹಂಚಿಕೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.

ಈ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಶಿರಹಟ್ಟಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳ ಕಚೇರಿಗೆ ಲಿಖಿತ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯತ್ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

### ಚಿಕ್ಕವಡ್ಡಟ್ಟಿ ಘಟನೆ ಬಳಿಕ 174 ಕುಟುಂಬಗಳಿಗೆ ಆಹಾರ ಕಿಟ್ ವಿತರಣೆ

## ಸಾಮರಸ್ಯದಿಂದ ಬದುಕಲು ಅಧಿಕಾರಿಗಳ ಮನವಿ



■ವಿಜಯಸಾಕ್ಷಿ ಸುದ್ದಿ, ಡಂಬಳ

ಮುಂಡರಗಿ ತಾಲೂಕಿನ ಚಿಕ್ಕವಡ್ಡಟ್ಟಿ ಗ್ರಾಮದಲ್ಲಿ ನಡೆದ ಘಟನೆಯ ನಂತರ ಸಂಕಷ್ಟಕ್ಕೊಳಗಾದ ಕುಟುಂಬಗಳಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಯಿತು.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಗದಗ ಹಾಗೂ ಮುಂಡರಗಿ ಸಮಾಜ ಕಲ್ಯಾಣ ಇಲಾಖೆಗಳ ವತಿಯಿಂದ ಪರಿಶಿಷ್ಟ ಜಾತಿಯ 107 ಹಾಗೂ ಪರಿಶಿಷ್ಟ ಪಂಗಡದ 67 ಸೇರಿದಂತೆ ಒಟ್ಟು 174 ಕುಟುಂಬಗಳಿಗೆ ರೇಷನ್ ಕಿಟ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಡಾ. ಶ್ರೀಮತಿ ನಂದಾ ಹಣಬರಟ್ಟಿ, ಎರಡು ಸಮಾಜದವರು ಪರಸ್ಪರ ಸಾಮರಸ್ಯದಿಂದ ಜೀವನ ನಡೆಸಬೇಕು. ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಅಗತ್ಯ ನೆರವು ನೀಡಲು ಇಲಾಖೆ ಬದ್ಧವಾಗಿದೆ ಎಂದು ಹೇಳಿದರು.

ಮುಂಡರಗಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಉದಯಕುಮಾರ್ ಯಲಿವಾಳ ಮಾತನಾಡಿ, ಎರಡೂ ಸಮಾಜದ ಜನರು ಸಹೋದರತೆ, ಪ್ರೀತಿ ಮತ್ತು ವಿಶ್ವಾಸದಿಂದ ಬದುಕಬೇಕು. ಗ್ರಾಮದಲ್ಲಿ ಶಾಂತಿ ಕದಡದಂತೆ ಎಲ್ಲರೂ ಒಗ್ಗಟ್ಟಿನಿಂದ ಇರಬೇಕು ಎಂದು ತಿಳಿಸಿದರು. ಸಮಸ್ಯೆಗಳು ಎದುರಾದರೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಬಾರದು. ಇಂತಹ ಘಟನೆಗಳು ಸಮಾಜದ ಶಾಂತಿ ಮತ್ತು ನೆಮ್ಮದಿಯನ್ನು ಹಾಳುಮಾಡುತ್ತವೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಾರ್ಡನ್‌ಗಳಾದ ಶ್ರೀಕಾಂತ್ ಅರಹುಣಸಿ, ಎಲ್.ಎಂ. ಗಚ್ಚಿನಮನಿ, ಯಲ್ಲಪ್ಪ ನಾಗಮ್ಮನವರ್, ಮಂಜುನಾಥ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಖೇಮ್ಯಾನಾಯ್ಕ್, ಬಿಲ್ ಕಲೆಕ್ಟರ್ ನದಾಫ್, ವಾಲಿಕಾರ ಚೆನ್ನಪ್ಪ, ನೀರಗಂಟಿ ದುರುಗಪ್ಪ, ಈರಣ್ಣ ಸೇರಿದಂತೆ ಗ್ರಾಮದ ಎರಡೂ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

## ಟಿ.ಕೆ. ಮಲಗೊಂಡ ವಾರ್ಷಿಕ ಪ್ರಶಸ್ತಿಗೆ ಶಿವಾನಂದ ಹಿರೇಮಠ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಮಂಗಳವಾರ ಪ್ರಕಟಿಸಲಾಗಿದ್ದು, ಟಿ.ಕೆ. ಮಲಗೊಂಡ ತನಿಖಾ ವರದಿ ಪ್ರಶಸ್ತಿಗೆ ಗದಗ ಜಿಲ್ಲೆಯ ವಿಜಯವಾಣಿ ದಿನಪತ್ರಿಕೆಯ ಹಿರಿಯ ವರದಿಗಾರರಾದ ಶಿವಾನಂದ ಹಿರೇಮಠ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯನ್ನು ಎಪ್ರಿಲ್ 11 ಮತ್ತು 12 ರಂದು ಬೀದರಿನಲ್ಲಿ ನಡೆಯಲಿರುವ 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಅವರಿಗೆ ಪ್ರದಾನ ಮಾಡಲಾಗುತ್ತದೆ.

ಪ್ರಶಸ್ತಿ ಭಾಜನರಾದ ಶಿವಾನಂದ ಹಿರೇಮಠ ಅವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

## ಆಸ್ತಿ ತೆರಿಗೆ ಪರಿಷ್ಕರಣೆ: ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಆಸ್ತಿ ಮಾಲೀಕರು ಹಾಗೂ ಅನುಭೋಗದಾರರಿಗೆ 2026–27ನೇ ಸಾಲಿನ ಆಸ್ತಿ ತೆರಿಗೆ ದರಗಳನ್ನು ಪರಿಷ್ಕರಿಸಲಾಗಿದೆ ಎಂದು ಪಟ್ಟಣ ಪಂಚಾಯತ್ ತಿಳಿಸಿದೆ.

ಪರಿಷ್ಕೃತ ದರಗಳ ಪ್ರಕಾರ ಖಾಲಿ ನಿವೇಶನಗಳಿಗೆ ಶೇ. 3, ವಸತಿ ಕಟ್ಟಡಗಳಿಗೆ ಶೇ. 4 ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಡಗಳಿಗೆ ಶೇ. 5 ರಂತೆ ತೆರಿಗೆ ವಿಧಿಸಲಾಗುತ್ತದೆ. ಎಪ್ರಿಲ್ 1ರಿಂದ ಎಪ್ರಿಲ್ 30ರವರೆಗೆ ತೆರಿಗೆ ಪಾವತಿಸಿದರೆ ಶೇ. 5 ರಿಯಾಯಿತಿ ಲಭ್ಯವಿದೆ.

ಮೇ 1ರಿಂದ ಜೂನ್ 30ರವರೆಗೆ ದಂಡವಿಲ್ಲದೆ ತೆರಿಗೆ ಪಾವತಿಸಬಹುದು. ಜುಲೈ 1ರಿಂದ ಬಾಕಿ ಇರುವ ತೆರಿಗೆ ಮೇಲೆ ಪ್ರತಿ ತಿಂಗಳು ಶೇ. 2ರಷ್ಟು ದಂಡ ವಿಧಿಸಲಾಗುತ್ತದೆ. ಆದ್ದರಿಂದ ಸಾರ್ವಜನಿಕರು ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸಿ ಪಟ್ಟಣದ ಅಭಿವೃದ್ಧಿಗೆ ಸಹಕರಿಸುವಂತೆ ಶಿರಹಟ್ಟಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪುಣ್ಯದ ಕಾರ್ಯಕ್ಕೆ ಸಹಾಯ ಸಹಕಾರ ಅಗತ್ಯ: ಎಚ್.ಕೆ. ಪಾಟೀಲ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪುಣ್ಯದ ಕಾರ್ಯಕ್ಕೆ ಸಹಾಯ ಸಹಕಾರ ಅಗತ್ಯವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಪಟ್ಟಣದ ಕೋಟಿ ಓಣಿಯ ನೂತನ ಮಸೀದಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಭಾರತ ದೇಶ ಶಾಂತಿ, ಸೌಹಾರ್ದತೆ, ಶ್ರೀಮಂತ ಸಂಸ್ಕೃತಿ, ಪರಂಪರೆ ಸೇರಿ ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದು, ಆ ಪರಂಪರೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈಗ ಜಾಗತಿಕ ಯುದ್ಧದಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಕಾರಣವಾಗುತ್ತಿದ್ದು ಎಲ್ಲರೂ ಸಹೋದರತ್ವದಿಂದ ಬಾಳಬೇಕು. ಈ ಕಟ್ಟಡಕ್ಕೆ ಎಲ್ಲರೂ ಸಹಾಯ ಸಹಕಾರ ನೀಡಿದಾಗ ಸುಂದರ ಕಟ್ಟಡ ನಿರ್ಮಾಣವಾಗುತ್ತದೆ ಎಂದರು.

ವಿಜಾಪುರ ಹಾಶಿಂಪೀರ್ ದರ್ಗಾದ ಮೌಲಾನಾ ಹಾಸೀಂ ತನ್ವಿರ ಪೀರ್ ಮಾತನಾಡಿ, ಭಾರತ ದೇಶ ಹಿಂದೂ–ಮುಸ್ಲಿಂ ಸೌಹಾರ್ದತೆಯಿಂದ ಕೂಡಿದ್ದು, ಎಲ್ಲರೂ ಒಂದಾಗಿ ಬಾಳಿದಾಗ ಮಾತ್ರ ಸುಖ, ಶಾಂತಿ, ನೆಮ್ಮದಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಮುಳಗುಂದದ ಮುಸ್ಲಿಂ ಧರ್ಮ ಗುರು ಇಸ್ಮಾಯಿಲ್ ಖಾಜಿ, ಇಮಾಮಸಾಬ ಶೇಖ್, ಬಿ.ವಿ. ಸುಂಕಾಪುರ, ವಿಜಯ ನೀಲಗುಂದ, ಹುಮಾಯೂನ್ ಮಾಗಡಿ, ರಫೀಕ್ ದಲೀಲ್, ಅಶೋಕ ಹುಣಶಿಮರ, ದಾವಲಸಾಬ ಕುರ್ತಕೋಟಿ, ಎಂ.ಎ. ಮುಲ್ಲಾ, ಕರೀಮಸಾಬ ರಾಮಗೇರಿ, ದಾವಲಸಾಬ ಶಿರಹಟ್ಟಿ, ಹಾಗೂ ಮುಸ್ಲಿಂ ಬಾಂಧವರು ಇದ್ದರು.

# ಅಂಬೇಡ್ಕರ್ ಸಂವಿಧಾನದಿಂದ ಸರ್ವರಿಗೂ ಅಸ್ತಿತ್ವ

▸▸ಮೊದಲನೇ ಪುಟದಿಂದ



ಅಂಬೇಡ್ಕರ್ ಸಂಘದ ಅಧ್ಯಕ್ಷ ದೊಡ್ಡಬಸಪ್ಪ ಗದ್ದಿಕೇರಿ, ಯಡ್ರಾಮ್ಮನಹಳ್ಳಿ ಮರಿಯಪ್ಪ, ಚೆಲುಗೋಡು ಮೈಲಪ್ಪ, ಕೇಚಿನಬಂಡಿ ದುರ್ಗಪ್ಪ, ಮೋರಿಗೇರಿ ಮೈಲಪ್ಪ, ಕಿತ್ನೂರು ದುರ್ಗಪ್ಪ, ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಅಡವಿ ಆನಂದವನಹಳ್ಳಿ ಪ್ರಭಾಕರ್, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕ ಮಹೇಶ್ ಎ., ಕೊರ್ಲಹಳ್ಳಿ ಶಿವಕುಮಾರ್, ಭರ್ಮಪ್ಪ, ಅಲ್ಬೂರು ಗಣೇಶ್, ಅರೆಗೊಂಡನಹಳ್ಳಿ ದುರ್ಗಪ್ಪ, ದಶಮಾಪುರ ಬಸವರಾಜ್, ಉಮೇಶ್ ಮೇಘರಾಜ್, ಕೆಂಚಪ್ಪ, ಮೈಲಾರಪ್ಪ, ರಮೇಶ್, ನಾಗರಾಜ್, ರಮೇಶ್, ಅಂಬಳಿ ದೇವೇಂದ್ರಪ್ಪ, ಉಪ್ಪಾರ್ ಹುಚ್ಚಪ್ಪ, ಲೋಕಪ್ಪ, ಅರ್ಜುನ, ಚಲವಾದಿ ಸಮಾಜದ ಮುಖಂಡರಾದ ಕಾಳಿ ಬಸವರಾಜ ಮತ್ತು ಹುಲುಗಪ್ಪ ಸೇರಿದಂತೆ ವಿವಿಧ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ನರಗುಂದ ಪುರಸಭೆ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ


■ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನರಗುಂದ ಪುರಸಭೆ ವ್ಯಾಪ್ತಿಯ ಪುರಸಭೆ ಮಾಲೀಕತ್ವದ ಹಾಗೂ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗೆಯನ್ನು ಲೀಸ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ.

ಸರ್ವೆ ಸಂಖ್ಯೆ 163, ಪ್ಲಾಟ್ ನಂ. 76 ನಿವೇಶನವನ್ನು ರಾಜ್ಯ ಸರಕಾರಿ ಇಲಾಖೆಗಳಿಗೆ ಮಂಜೂರಾತಿ ನೀಡುವ ಉದ್ದೇಶದಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ ಹಾಗೂ ಸರ್ಕಾರದ ಅಧಿಸೂಚನೆ ಅನ್ವಯ ಪುರಸಭೆ ಸಾಮಾನ್ಯ ಸಭೆ ಠರಾವು ಸಂಖ್ಯೆ 185ರ ಪ್ರಕಾರ, ಮಾರ್ಚ್ 23ರಂದು ನಡೆದ ಸಭೆಯಲ್ಲಿ 30 ವರ್ಷಗಳಯ ಅವಧಿಗೆ ಮೀರದಂತೆ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಈ ನಿವೇಶನವನ್ನು ನರಗುಂದ ತಾಲೂಕ ಕಾಂಗ್ರೆಸ್ (ಐ) ಸಮಿತಿಗೆ ನೀಡಲು ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಈ ಸಂಬಂಧ ಯಾರಿಗಾದರೂ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆ ಹೊರಬಂದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತವಾಗಿ ಪುರಸಭೆಗೆ ಸಲ್ಲಿಸಬಹುದು. ನಿಗದಿತ ಅವಧಿ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ನರಗುಂದ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು 'ಒಕ್ಕಲಿಗ ಮುದ್ದಣ್ಣನವರ ವಚನಗಳ ವಿಶ್ಲೇಷಣೆ' ಗ್ರಂಥ ಬಿಡುಗಡೆ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜಗದ್ಗುರು ತೋಂಟದಾರ್ಯ ಮಠದಲ್ಲಿ ಇಂದು ಬುಧವಾರ ಸಂಜೆ 6:30ಕ್ಕೆ ಜರುಗುವ ಜಾತ್ರಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಲಿರುವ ಕರ್ನಾಟಕ ಸರ್ಕಾರದ ಬೃಹತ್ ಕೈಗಾರಿಕಾ ಸಚಿವರಾದ ಎಂ.ಬಿ ಪಾಟೀಲ ಅವರು ಕಾಯಕಯೋಗಿ ಶರಣ ಒಕ್ಕಲಿಗರ ಮುದ್ದಣ್ಣನವರ ವಚನಗಳ ವಿಶ್ಲೇಷಣೆ ಎಂಬ ಗ್ರಂಥವನ್ನು ಬಿಡುಗಡೆಗೊಳಿಸಲಿದ್ದಾರೆ.

ಗ್ರಂಥವನ್ನು ಡಾ.ವಿಜಯಕುಮಾರ ಕಮ್ಮಾರ ಅವರು ರಚಿಸಿದ್ದು, ವಚನ ಪಿತಾಮಹ ಡಾ.ಫ.ಗು ಹಳಕಟ್ಟಿ ಸಂಶೋಧನಾ ಕೇಂದ್ರ ಬಿ.ಎಲ್.ಡಿ.ಇ ಸಂಸ್ಥೆ ಬಿಜಾಪೂರ ಇವರು ಗ್ರಂಥದ ಪ್ರಕಾಶಕರಾಗಿದ್ದಾರೆ.

# ಅಗ್ನಿಕುಂಡ ಹಾಯ್ದ ನೂರಾರು ಭಕ್ತರು

## ಲಕ್ಕುಂಡಿಯಲ್ಲಿ ಕೋಟೆ ವೀರಭದ್ರೇಶ್ವರ ಜಾತ್ರೆ









ಜಾತ್ರೆಯ ವೇಳೆ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ಇದೇ ವೇಳೆ, ಇಬ್ಬರು ಬಾಲ ಪುರವಂತರು ನಾಲಿಗೆ ಮೇಲೆ ಕರ್ಪೂರದ ದೀಪ ಇಟ್ಟು ಪವಾಡ ಪ್ರದರ್ಶಿಸಿದರೆ, ಅಂಧ ವಿಕಲಚೇತನ ಕಲ್ಲಪ್ಪ ಬಣವಿ ಹೇಳಿದ ವೀರಭದ್ರ ದೇವರ ಚರಿತ್ರೆ ಭಕ್ತರನ್ನು ಮಂತ್ರಮುಗ್ಧರನ್ನಾಗಿಸಿತು.

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಐತಿಹಾಸಿಕ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಎರಡನೇ ದಿನ ನಡೆದ ಗುಗ್ಗಳೋತ್ಸವವು ಭಕ್ತಿ, ಸಂಪ್ರದಾಯ ಮತ್ತು ವೀರಭಾವದ ಅದ್ಭುತ ಸಂಯೋಜನೆಯಾಗಿ ಗಮನ ಸೆಳೆಯಿತು. ನೂರಾರು ಭಕ್ತರು ಅಗ್ನಿಕುಂಡದಲ್ಲಿ ಹಾಯ್ದು ದೇವರ ದರ್ಶನ ಪಡೆದ ದೃಶ್ಯಗಳು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ಪರಿಣಮಿಸಿವೆ.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಪ್ಯಾಟಿ ಹನುಮಂತ ದೇವರ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ, ಗ್ರಾಮ ಹಾಗೂ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಪುರವಂತರು ವೀರಭದ್ರ ದೇವರ ವಿಭಿನ್ನ ಅವತಾರಗಳ ವೇಷಭೂಷಣಗಳಲ್ಲಿ ಕಾಣಿಸಿಕೊಂಡು ವೀರಾವೇಶದ ಒಡುಪುಗಳ ಮೂಲಕ ದೇವರ ಚರಿತ್ರೆಯನ್ನು ಮನಮಿಡಿಯುವಂತೆ ನಿರೂಪಿಸಿದರು. ದಕ್ಷ ಬ್ರಹ್ಮನ ಕಥಾವಸ್ತುವನ್ನು ಒಳಗೊಂಡ ಈ ಪ್ರದರ್ಶನಗಳು ಭಕ್ತರಲ್ಲಿ ಭಾವೋದ್ರೇಕ ಮೂಡಿಸಿತು.

ಸಮ್ಮಾಳ ಮೇಳದ ತಾಳಕ್ಕೆ ಯುವಕರು ಕುಣಿದು ಮೆರವಣಿಗೆಯ ಉತ್ಸಾಹವನ್ನು ಹೆಚ್ಚಿಸಿದರೆ, "ಈರಣ್ಣ ದೊರೆಯೇ ನಿನಗಾರು ಸರಿಯೇ" ಎಂಬ ಘೋಷಣೆಗಳು ಜಾತ್ರಾ ವಾತಾವರಣವನ್ನು ಮತ್ತಷ್ಟು ಉಜ್ವಲಗೊಳಿಸಿತು.

ಭಕ್ತಿಯ ಗಾಢತೆಯನ್ನು ತೋರಿಸುವ ದೃಶ್ಯವಾಗಿ, 108 ಗಂಟುಗಳಿದ್ದ 50 ಮೀಟರ್‌ಗೂ ಹೆಚ್ಚು ಉದ್ದದ ದಾರವನ್ನು 50ಕ್ಕೂ ಹೆಚ್ಚು ಯುವಕರು ಶಸ್ತ್ರದ ಮೂಲಕ ತಮ್ಮ ಗಲ್ಲದಲ್ಲಿ ಸೇರಿಸಿಕೊಂಡರು. ಮಹಿಳೆಯರು ಹಾಗೂ ಮಕ್ಕಳು ಸಹ ಗಲ್ಲ ಮತ್ತು ಕೈಗಳಿಗೆ ಶಸ್ತ್ರ ಹಾಕಿಸಿಕೊಂಡು ತಮ್ಮ ಭಕ್ತಿಯನ್ನು ಅರ್ಪಿಸಿದರು.

ದೇಶ-ವಿದೇಶದ ಗಮನ ಸೆಳೆದ ಉತ್ಖನನ ಸ್ಥಳದ ಪಕ್ಕದಲ್ಲಿ ನಿರ್ಮಿಸಲಾದ 2010 ಅಳತೆಯ ಅಗ್ನಿಕುಂಡದಲ್ಲಿ ಮಕ್ಕಳು, ಯುವಕರು ಮತ್ತು ವೃದ್ಧರು ಸೇರಿ ನೂರಾರು ಭಕ್ತರು ಹಾಯ್ದು ವೀರಭದ್ರ ದೇವರ ದರ್ಶನ ಪಡೆದರು. ಪಲ್ಲಕ್ಕಿ ಮತ್ತು ಸಮ್ಮಾಳ ಮೇಳದ ವಾದ್ಯಗಳನ್ನು ಹೊತ್ತು ಅಗ್ನಿಕುಂಡ ದಾಟಿದ ದೃಶ್ಯಗಳು ಭಕ್ತಿಯ ಪರಾಕಾಷ್ಠೆಯನ್ನು ತೋರಿಸಿವೆ.

# ಮಹಾವೀರರ ಉಪದೇಶಗಳು ಮನುಕುಲಕ್ಕೆ ದಾರಿದೀಪ



■ವಿಜಯಸಾಕ್ಷಿ ಸುದ್ದಿ, ಗದಗ

ಜೈನ ಪರಂಪರೆಯ 24ನೆಯ ತೀರ್ಥಂಕರ ಮಹಾವೀರರ ಅಹಿಂಸೆ, ಸತ್ಯ ಮತ್ತು ತ್ಯಾಗದ ತತ್ವಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿದ್ದು, ಮಾನವೀಯತೆ ಮತ್ತು ಸಹಿಷ್ಣುತೆಯನ್ನು ಬೆಳೆಸಲು ಮಹಾವೀರರ ಉಪದೇಶಗಳು ದಾರಿದೀಪವಾಗಿವೆ ಎಂದು ವೆಂಕಟೇಶ ವಜ್ರಂಗಿ ಹೇಳಿದರು.

ಗದಗ ಜಿಲ್ಲಾ ದಿಗಂಬರ ಜೈನ ಸಂಘವು ಮಹಾವೀರ ತೀರ್ಥಂಕರರ 2625ನೆಯ ಜನ್ಮಕಲ್ಯಾಣಕ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಮಹಾವೀರರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಶಾಂತಿ ಮತ್ತು ಸಮಾನತೆ ಸ್ಥಾಪನೆ ಸಾಧ್ಯ ಎಂದರು.

ಸಂಘದ ಉಪಾಧ್ಯಕ್ಷ ಎಂ.ಟಿ. ಕಬ್ಬಿಣ ಮಾತನಾಡಿ, ಮಹಾವೀರರ ತತ್ವಗಳು ಜಗತ್ತಿನ ಶಾಂತಿಗೆ ಮೂಲಸ್ತಂಭವಾಗಿದ್ದು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನೈತಿಕ ಮೌಲ್ಯಗಳು ಬಲವಾಗುತ್ತವೆ ಹಾಗೂ ಸಮಾಜದಲ್ಲಿ ಸಮಾನತೆ ಮತ್ತು ಶಾಂತಿ ಸ್ಥಾಪನೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಲೋಹಿತಕುಮಾರ ಕಾಸಾರ ಮಾತನಾಡಿ, ಇಂದಿನ ಹಿಂಸಾಚಾರ ಮತ್ತು ಅಸಹಿಷ್ಣುತೆಯ ಪರಿಸ್ಥಿತಿಯಲ್ಲಿ ಮಹಾವೀರರ ಸಂದೇಶಗಳು ದಾರಿದೀಪವಾಗಿವೆ. ಸರ್ಕಾರದ ಇಲಾಖೆಗಳು, ಶಾಲಾ-ಕಾಲೇಜುಗಳು, ಸಂಘ-ಸಂಸ್ಥೆಗಳು ಇತರೆ ಮತಪಂಥಗಳ ದಾರ್ಶನೀಕರು, ಮಹನೀಯರ ಜಯಂತಿಗಳನ್ನು ಶ್ರದ್ಧೆ-ಭಕ್ತಿಯಿಂದ ಆಚರಿಸುವಂತೆ ಜೈನ ಧರ್ಮದ ಮಹಾಮಾನವತಾದಿ ಮಹಾವೀರರ ಜಯಂತಿಯನ್ನೂ ಆಚರಿಸಿ ಅವರ ಆದರ್ಶಗಳನ್ನು ಸ್ಮರಿಸಬೇಕೆಂದು ಮನವಿ ಮಾಡಿದರು.

ಸಂಘದ ಅಧ್ಯಕ್ಷ ಪಿ.ಎ. ಕುಲಕರ್ಣಿ ಮಾತನಾಡಿ, ಮಹಾವೀರರ ಅಹಿಂಸೆ, ಸತ್ಯ, ಅಪರಿಗ್ರಹ ಮತ್ತು ತ್ಯಾಗದ ತತ್ವಗಳು ಇಂದಿನ ಸಮಾಜದಲ್ಲಿ ಅತ್ಯಂತ ಪ್ರಸ್ತುತವಾಗಿವೆ ಎಂದು ತಿಳಿಸುತ್ತ, ಮಾನವಕುಲವು ಶಾಂತಿ ಮತ್ತು ಸಹಜೀವನವನ್ನು ಸಾಧಿಸಲು ಮಹಾವೀರರ ಉದ್ದೇಶಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವೆಂದು ಹೇಳಿದರು. ಕಾರ್ಯಕ್ರಮದಲ್ಲಿ ಆಹಾರದಾನಿ ಎ.ಎನ್. ಬಸ್ತಿ ಅವರನ್ನು ಸನ್ಮಾನಿಸಲಾಯಿತು. ಮಹವೀರ ಜಯಂತಿ ಸಂಭ್ರಮದಲ್ಲಿ ಹಲವು ಶ್ರಾವಕ, ಶ್ರಾವಕಿಯರು ಭಾಗಿಯಾಗಿದ್ದರು.

# ಎ.10 ರಂದು ಗ್ಯಾಂಗ್ಸ್ ಆಫ್ ಯು.ಕೆ. ಚಿತ್ರ ರಿಲೀಸ್

■ವಿಜಯಸಾಕ್ಷಿ ಸುದ್ದಿ, ಗದಗ

ಡೆಡ್ಲಿ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ಡೆಡ್ಲಿ ಸೋಮ, ಮಾದೇಶ ಖ್ಯಾತಿಯ ರವಿ ಶ್ರೀವತ್ಸ ನಿರ್ಮಾಣ ಮತ್ತು ನಿರ್ದೇಶನದ ಗ್ಯಾಂಗ್ಸ್ ಆಫ್ ಯು.ಕೆ. ಚಿತ್ರ ಇದೇ ಎಪ್ರಿಲ್ 10 ರಂದು ರಾಜ್ಯಾದ್ಯಂತ ತೆರೆಕಾಣಲಿದೆ ಎಂದು ಚಿತ್ರದ ನಿರ್ದೇಶಕ ರವಿ ಶ್ರೀವತ್ಸ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀವತ್ಸ, ಈ ಚಿತ್ರವು ಬಾಗಲಕೋಟ, ಹೆರಕಲ್, ಶಿರೂರ, ಹುನಗುಂದ, ಇಳಕಲ್, ಸುತ್ತಮುತ್ತ ಹಾಗೂ ಬೆಂಗಳೂರಿನಲ್ಲಿ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ಸಂತ ಶಿಶುನಾಳ ಶರೀಫರ 8 ಗೀತೆಗಳನ್ನು ಬಳಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಚಿತ್ರದಲ್ಲಿ ಒರಟ ಪ್ರಶಾಂತ, ಕಿಂಗ್ ಮುನಿ, ಸೋನು ಉಪಾಧ್ಯ, ಪೃಥ್ವಿ ಸುಬ್ಬಯ್ಯ, ಕೆ.ಆರ್. ಅಮೋಘ, ಸತ್ಯ, ಕೋಟೆ ಪ್ರಭಾಕರ, ಬಿ.ನವೀನಕೃಷ್ಣ, ಜ್ಯೋತಿಷ ಶೆಟ್ಟಿ, ಪದ್ಮಾ ವಸಂತಿ, ಉಗ್ರಂ ರೆಡ್ಡಿ, ವಿಕಾಸ ಮುದಕರಿ, ಕಿರಣ, ದಿಲ್ಲನ್, ಚೆಂಗಪ್ಪ ಗಜೇಂದ್ರಗಡ, ಮಹಾಂತೇಶ ಹಳ್ಳೂರ, ಅಮೃತ ಹಿರಣ್ಯ, ಗುರುರಾಜ ಗೌಡ ಸೇರಿದಂತೆ ಉತ್ತರ ಕರ್ನಾಟಕದ ಸ್ಥಳೀಯ ಕಲಾವಿದರು ನಟಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಈಗಾಗಲೇ ಗ್ಯಾಂಗ್ಸ್ ಆಫ್ ಯುಕೆ ಚಿತ್ರದ ಟೀಸರ್ ಯೂಟ್ಯೂಬ್‌ನಲ್ಲಿ ಭರ್ಜರಿ ಸದ್ದು ಮಾಡುತ್ತಿದ್ದು, ಸೆನ್ಸಾರ್ ಮಂಡಳಿಯಿಂದ ಗೆಲುವು ಸಿಕ್ಕಿದೆ. ಇದೀಗ ಚಿತ್ರದ 2ನೇ ಗೆಲುವು ಪ್ರೇಕ್ಷಕ ಪ್ರಭುಗಳಿಂದ ನಿರೀಕ್ಷಿಸಲಾಗಿದೆ. ಈ ಚಿತ್ರವನ್ನು ಕರ್ನಾಟಕದ ಜನತೆ ಖಂಡಿತ ಗೆಲ್ಲಿಸುತ್ತಾರೆ ಎಂಬ ಭರವಸೆ ಇದೆ ಎಂದು ಶ್ರೀವತ್ಸ ಹೇಳಿದರು.

ಈ ಸುದ್ದಿಗೋಷ್ಠಿಯಲ್ಲಿ ಎಂ.ಎಸ್. ರಮೇಶ, ಒರಟ ಪ್ರಶಾಂತ, ಲಕ್ಷ್ಮೀ ನಾರಾಯಣ ರೆಡ್ಡಿ, ಪೃಥ್ವಿ ಸುಬ್ಬಯ್ಯ, ಪ್ರಭು ಗಂಜಿಹಾಳ ಅವರು ಉಪಸ್ಥಿತರಿದ್ದರು.




# ಅದ್ದೂರಿ ಭಗೀರಥ ಜಯಂತಿ ಆಚರಣೆಗೆ ನಿರ್ಧಾರ

## ತಾಲೂಕು ಉಪ್ಪಾರ ಸಮಾಜದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಉಪ್ಪಾರ ಸಮಾಜದ ಕುಲಗುರು ರಾಜರ್ಷಿ ಶ್ರೀ ಭಗೀರಥ ಅವರ ಜಯಂತಿಯನ್ನು ಸರ್ಕಾರದ ವತಿಯಿಂದ ಎಪ್ರಿಲ್ 23 ರಂದು ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ, ತಾಲೂಕು ಉಪ್ಪಾರ ಭಗೀರಥ ಸಂಘ ಹಾಗೂ ಸಮಾಜದ ವತಿಯಿಂದ ಈ ವರ್ಷ ಅದ್ದೂರಿಯಾಗಿ ಆಚರಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಾಲೂಕು ಅಧ್ಯಕ್ಷ ಕನಕಪ್ಪ ತಿಳಿಸಿದ್ದಾರೆ.

ಪಟ್ಟಣದ ಭಗೀರಥ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಅನೇಕ ವರ್ಷಗಳಿಂದ ವಿವಿಧ ಕಾರಣಗಳಿಂದ ಭಗೀರಥ ಜಯಂತಿ ವೈಭವದಿಂದ ನಡೆಯದೇ ಇದ್ದುದನ್ನು ಉಲ್ಲೇಖಿಸಿ, ಈ ಬಾರಿ ನೂತನ ತಾಲೂಕು ಉಪ್ಪಾರ ಯುವ ಘಟಕದೊಂದಿಗೆ ಸಮಾಜದ ಸಂಘಟನೆ ಬಲಪಡಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಭಗೀರಥ ಉಪ್ಪಾರ ಯುವ ಘಟಕಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಬಂಡಿಹಳ್ಳಿ ಬಸವರಾಜ್, ಉಪಾಧ್ಯಕ್ಷರಾಗಿ ಮಾರುತಿ ಯು.ಬಿ ಹಾಗೂ ಪ್ರಭಾಕರ್, ಪ್ರಧಾನ ಕಾರ್ಯದರ್ಶಿಯಾಗಿ ಕಾರ್ತಿಕ್ ಹಂಪಾಪಟಣ್ಣ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸದಸ್ಯರಾಗಿ ಅಯ್ಯಪ್ಪ ಸ್ವಾಮಿ, ಗಣೇಶ್ ಮಾಲವಿ, ಪ್ರವೀಣ್, ಅಂಕಸಮುದ್ರ ಬಸವರಾಜ್, ಹನುಮಂತ ಹೊಸಪೇಟೆ, ಯು. ಮಂಜುನಾಥ್, ಬಣಕಾರ್ ಆನಂದ್, ಪ್ರಸನ್ನ, ಜಂಬೂನಾಥ್ ಹಾಗೂ ಸಂತೋಷ್ ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ಹಿರಿಯರಾದ ಬಂಡಿಹಳ್ಳಿ ರಾಜಣ್ಣ ಹಾಗೂ ಗುಂಡ್ರು ಹನುಮಂತಪ್ಪ ಮಾತನಾಡಿ ಸಲಹೆ ನೀಡಿದರು.

ವೆಂಕಟೇಶ್ ಹಬೋಹಳ್ಳಿ, ವೆಂಕಟೇಶ್ ಅಂಕಸಮುದ್ರ, ರಾಮಣ್ಣ ಬಂಡಿಹಳ್ಳಿ, ಉಪ್ಪಾರಗಟ್ಟಿ ದುರುಗಪ್ಪ, ಸಾಹುಕಾರ್ ಕೊಟ್ರೇಶ್, ಶಂಕ್ರಪ್ಪ, ಪರಶುರಾಮ್ ಬಿಜಿಹಳ್ಳಿ, ರವಿಕುಮಾರ್, ಹಾಲೇಶ, ಬಸಪ್ಪ ಬೆಣ್ಣಿಕಲ್ಲು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅಲಗಿಲವಾಡದಲ್ಲಿ ಮಹಾವೀರ ಜಯಂತಿ ವೈಭವ

## ಅಲಗಿಲವಾಡ ಶಾಲೆಯಲ್ಲಿ ಭಗವಾನ್ ಮಹಾವೀರರ ಜಯಂತ್ಯುತ್ಸವ ಕಾರ್ಯಕ್ರಮ




ಅಹಿಂಸೆ, ಅಪರಿಗ್ರಹ, ಬ್ರಹ್ಮಚರ್ಯ ಮತ್ತು ಆತ್ಮಶಿಸ್ತಿನ ಮಹತ್ವವನ್ನು ಸಾರಿದ ಅವರ ತತ್ವಗಳು ಇಂದಿಗೂ ಮಾನವಕುಲಕ್ಕೆ ದಾರಿದೀಪವಾಗಿವೆ. ಕ್ರಿ.ಪೂ. 527ರಲ್ಲಿ ಪಾವಾದಲ್ಲಿ 72ನೇ ವಯಸ್ಸಿನಲ್ಲಿ ನಿರ್ವಾಣ ಹೊಂದಿದ ಮಹಾವೀರರು, ಯುದ್ಧವಿಲ್ಲದೆ ಜಗತ್ತನ್ನು ಗೆದ್ದ ಮಹಾಪುರುಷರಾಗಿ ಗುರುತಿಸಿಕೊಂಡಿದ್ದಾರೆ.

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ತಾಲೂಕಿನ ಅಲಗಿಲವಾಡ ಶಾಲೆಯಲ್ಲಿ ಜೈನ ಧರ್ಮದ 24ನೇ ತೀರ್ಥಂಕರರಾದ ಭಗವಾನ್ ವರ್ಧಮಾನ ಮಹಾವೀರರ ಜಯಂತ್ಯುತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವು ಕೇವಲ ಆಚರಣೆಯ ಮಟ್ಟಕ್ಕೆ ಸೀಮಿತವಾಗದೆ, ಮಹಾವೀರರ ತತ್ವಗಳು ಮತ್ತು ಜೀವನ ಸಂದೇಶಗಳನ್ನು ವಿದ್ಯಾರ್ಥಿಗಳಲ್ಲಿ ಆಳವಾಗಿ ಬಿತ್ತುವ ಉದ್ದೇಶದಿಂದ ನಡೆಸಲಾಯಿತು.

ಕ್ರಿ.ಪೂ. 599ರಲ್ಲಿ ಬಿಹಾರದ ವೈಶಾಲಿ ಸಮೀಪದ ಕುಂದ ಗ್ರಾಮದಲ್ಲಿ ಜನಿಸಿದ ಮಹಾವೀರರು, ವೈಶಾಲಿ ಗಣರಾಜ್ಯದ ರಾಜಕುಮಾರರಾದ ಸಿದ್ಧಾರ್ಥ ಮತ್ತು ತ್ರಿಶಾಲಾದೇವಿಯವರ ಪುತ್ರರಾಗಿದ್ದರು. ಪಾರ್ಶ್ವನಾಥನ ಬೋಧನೆಗಳ ಪ್ರಭಾವದಲ್ಲಿ ಬೆಳೆದ ಅವರು ಬಾಲ್ಯದಿಂದಲೇ ಧಾರ್ಮಿಕ ಚಿಂತನೆಗಳಿಗೆ ಆಕರ್ಷಿತರಾಗಿದ್ದರು.

16ನೇ ವಯಸ್ಸಿನಲ್ಲಿ ಯಶೋಧರರೊಂದಿಗೆ ವಿವಾಹವಾದ ಮಹಾವೀರರಿಗೆ ಅನೋಜಾ (ಪ್ರಿಯದರ್ಶಿನಿ) ಎಂಬ ಪುತ್ರಿ ಜನಿಸಿದರು. ಆದಾಗ್ಯೂ, ಕೌಟುಂಬಿಕ ಜೀವನದ ಮಧ್ಯೆ ಆಳವಾದ ಅಸಮಾಧಾನವನ್ನು ಅನುಭವಿಸಿದ ಅವರು, ಆತ್ಮಶೋಧನೆಗಾಗಿ 30ನೇ ವಯಸ್ಸಿನಲ್ಲಿ ಕುಟುಂಬವನ್ನು ತೊರೆದು ಸನ್ಯಾಸ ಜೀವನವನ್ನು ಆರಿಸಿಕೊಂಡರು.

ದೇಶದಾದ್ಯಂತ ಸಂಚರಿಸಿ ಕಠಿಣ ತಪಸ್ಸನ್ನು ಅನುಸರಿಸಿದ ಮಹಾವೀರರು, ಅನೇಕ ಅವಮಾನಗಳು ಮತ್ತು ಸವಾಲುಗಳನ್ನು ಎದುರಿಸಿದರೂ ತಮ್ಮ ಧ್ಯೇಯದಲ್ಲಿ ಅಚಲರಾಗಿದ್ದರು. ಕೊನೆಗೆ 42ನೇ ವಯಸ್ಸಿನಲ್ಲಿ ವೈಶಾಖ ಮಾಸದಲ್ಲಿ ಜೃಂಭಿಕಾ ಗ್ರಾಮದ ಬಳಿ ರಿಜುಪಾಲಿಕಾ ನದಿಯ ದಡದಲ್ಲಿ ಜ್ಞಾನೋದಯವನ್ನು ಹೊಂದಿ "ಜಿನ" ಎಂಬ ಬಿರುದಿಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಪ್ರಧಾನಗುರು ಹಾಲೇಶ ಎಸ್. ಜಕ್ಕಲಿ, ಶಿಕ್ಷಕರಾದ ನೇಮೇಶ ಯರಗುಪ್ಪಿ, ಅಂಗನವಾಡಿ ಗುರುಮಾತೆಯರಾದ ಮಹಾದೇವಿ ಹಸವಿಮಠ, ಅಡುಗೆ ಸಿಬ್ಬಂದಿಗಳಾದ ರೇಷ್ಮಾ ನದಾಫ್, ವಿದ್ಯಾರ್ಥಿಗಳು ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

## ಮಹಾವೀರರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ




■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಮಹಾವೀರರ ಸತ್ಯ ಮತ್ತು ಅಹಿಂಸೆಯ ತತ್ವಗಳು ಇಂದಿನ ಸಮಾಜದಲ್ಲಿ ಅತ್ಯಂತ ಪ್ರಸ್ತುತವಾಗಿದ್ದು, ಪ್ರತಿಯೊಬ್ಬರೂ ಅವುಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಎಸ್.ವಿ. ಅಂಗಡಿ ತಿಳಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC) ಕೇಂದ್ರ ಕಛೇರಿಯಲ್ಲಿ ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ದೀಪ ಬೆಳಗಿಸುವ ಮೂಲಕ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿರೂಪಾಕ್ಷ ಕಟ್ಟಿಮನಿ ಅವರು, ಭಗವಾನ್ ಮಹಾವೀರರ ಜೀವನದ ಮೌಲ್ಯಗಳನ್ನು ವಿವರಿಸಿ, ಅವರ ಉಪದೇಶಗಳು ಮಾನವೀಯತೆ ಮತ್ತು ಶಾಂತಿಯ ಮಾರ್ಗದರ್ಶಕವಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರ ಕಚೇರಿಯ ಸಿಬ್ಬಂದಿಗಳಾದ ವಿ.ಎಫ್. ವಿಜಾಪುರ, ಮಂಜುನಾಥ ಗಿಣಿಮಾವ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಾಳೆ ಮಾರುತಿ ದೇವಸ್ಥಾನದ ಜೀರ್ಣೋದ್ಧಾರ ಭೂಮಿಪೂಜೆ

■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಕರ್ನಾಟಕ ರಾಜ್ಯದ ಕಾನೂನು ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ. ಪಾಟೀಲ ಮತ್ತು ಯುವ ಕಾಂಗ್ರೆಸ್ ಘಟಕದ ಜಿಲ್ಲಾ ಅಧ್ಯಕ್ಷರಾದ ಕೃಷ್ಣಗೌಡ ಎಚ್. ಪಾಟೀಲ ಇವರು ದಿ. 2-4-2026ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಟರ್ನಲ್ ಪೇಟೆ, ಸುಭಾಸ ರೋಡಿನಲ್ಲಿರುವ ಮಾರುತಿ ದೇವಸ್ಥಾನದ ಕಟ್ಟಡ ಹಾಗೂ ಜೀರ್ಣೋದ್ಧಾರದ ಭೂಮಿಪೂಜೆಗೆ ಆಗಮಿಸಲಿದ್ದಾರೆ. ಕಾರಣ, ಟರ್ನಲ್ ಪೇಟೆಯ ಎಲ್ಲ ಭಕ್ತಾದಿಗಳು ಬಂದು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಮಾರುತಿ ದೇವಸ್ಥಾನದ ಅಧ್ಯಕ್ಷರು ಮೋಹನಸಿಂಗ ಗಂಗಾವತಿ ಮತ್ತು ಕಾರ್ಯದರ್ಶಿ ತಿಮ್ಮಣ್ಣ ಗಣಪಾ ಪತ್ರಿಕಾ ಪ್ರಕಟಣೆಯ ಮೂಲಕ ಕೋರಿದ್ದಾರೆ.

# ಸಾಮೂಹಿಕ ವಿವಾಹ-ಮಹಾರಥೋತ್ಸವ

## ಹಾಲೇಶ್ವರ ಶಿವಯೋಗಾಶ್ರಮದ 48ನೇ ಜಾತ್ರಾ ಮಹೋತ್ಸವಕ್ಕೆ ಇಂದಿನಿಂದ ಚಾಲನೆ

■ವಿಜಯಸಾಕ್ಷಿ ಸುದ್ದಿ, ಡಂಬಳ

ಜಾಗತಿಕ ಯುಗದಲ್ಲಿಯೂ ಕನ್ನಡ, ನೆಲ, ಜಲ, ಪರಿಸರ ಹಾಗೂ ಸೌಹಾರ್ದತೆಯನ್ನು ಉಳಿಸಿ, ಜಾತಿ-ಮತ ಭೇದವಿಲ್ಲದ ಸಮಸಮಾಜ ನಿರ್ಮಾಣದ ಸಂದೇಶ ಸಾರುವ ಪೇಠಾ ಆಲೂರಿನ ಶ್ರೀ ಹಾಲೇಶ್ವರ ಕೃಪಾಪೋಷಿತ ಶಿವಯೋಗಾಶ್ರಮದ 48ನೇ ಜಾತ್ರಾ ಮಹೋತ್ಸವವು ಪರಮಪೂಜ್ಯ ತ್ರಿವಿಧ ದಾಸೋಹಿ ಶ್ರೀ ಹಾಲೇಶ್ವರ ಶಿವಶರಣರ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಲಿದೆ.

ಎಪ್ರಿಲ್ 1ರಂದು ಹಿರೇಮಠ ನೆಗಳೂರಿನ ಪರಮಪೂಜ್ಯ ಲಿಂಗೈಕ್ಯ ಷ.ಭ್ರ. ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳ ಅನುಗ್ರಹದಲ್ಲಿ ಶ್ರೀ ಹಾಲೇಶ್ವರ ಗದ್ದುಗೆ ಹಾಗೂ ದುರ್ಗಾದೇವಿ ಮೂರ್ತಿಗೆ ವೇದಮೂರ್ತಿ ಮಲ್ಲಯ್ಯ ಶಿವಯ್ಯ ಹಿರೇಮಠರಿಂದ ರುದ್ರಾಭಿಷೇಕ ನಡೆಯಲಿದೆ.

ಅದೇ ದಿನ ಮಧ್ಯಾಹ್ನ 12:31ಕ್ಕೆ ಅಭಿಜಿತ್ ಶುಭ ಮುಹೂರ್ತದಲ್ಲಿ 9 ಜೋಡಿ ವಧು-ವರರ ಸಾಮೂಹಿಕ ವಿವಾಹಗಳು ನಡೆಯಲಿದ್ದು, ಶ್ರೀ ಷ.ಬ್ರ. ಮುದುಕೇಶ್ವರ ಶಿವಾಚಾರ್ಯರು



ಮಹಾಸ್ವಾಮಿಗಳು ಹಾಗೂ ಶ್ರೀ ಹಾಲೇಶ್ವರ ಶಿವಶರಣರಿಂದ ಆಶೀರ್ವಚನ ದೊರೆಯಲಿದೆ. ರಾತ್ರಿ 10:35ಕ್ಕೆ ಶ್ರೀ ಹಾಲಶಿವಯೋಗೀಶ್ವರ ಅಡ್ಡಪಲ್ಲಕ್ಕಿ ಹಾಗೂ ಮುಳ್ಳುಗದ್ದುಗೆ ನಡೆಯಲಿದೆ.

ಎಪ್ರಿಲ್ 2ರಂದು ಸಂಜೆ 5:31ಕ್ಕೆ ಮಹಾರಥೋತ್ಸವ ನಡೆಯಲಿದ್ದು, ಧರ್ಮಸಭೆಯಲ್ಲಿ ಕೊಪ್ಪಳದ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ನೆಗಳೂರಿನ ಶ್ರೀ ಗುರುಶಾಂತೇಶ್ವರ ಶ್ರೀ ಹಾಗೂ ಶ್ರೀ ಹಾಲೇಶ್ವರ ಶಿವಶರಣರು ಆಶೀರ್ವಚನ ನೀಡಲಿದ್ದಾರೆ. ನಂತರ ವಿದ್ಯಾರ್ಥಿಗಳಿಂದ ಹಾಗೂ ಕಲಾವಿದರಿಂದ ಸಾಂಸ್ಕೃತಿಕ ಮತ್ತು ಜಾನಪದ ಕಾರ್ಯಕ್ರಮಗಳು ನಡೆಯಲಿವೆ. ಎಪ್ರಿಲ್ 3ರಂದು ಲಘು ರಥೋತ್ಸವ, ಉಪನ್ಯಾಸ ಕಾರ್ಯಕ್ರಮ ಹಾಗೂ ಸಂಗೀತ ರಸಮಂಜರಿ ಆಯೋಜಿಸಲಾಗಿದೆ.

ಜಾತ್ರೆಯ ಯಶಸ್ಸಿಗಾಗಿ ಜಾತ್ರಾ ಸಮಿತಿ ಅಧ್ಯಕ್ಷ ವೇದಮೂರ್ತಿ ಮಲ್ಲಯ್ಯ ಹಿರೇಮಠ, ಗೌರವಾಧ್ಯಕ್ಷ ಹಾಲಪ್ಪ ಕಬ್ಬೆರಳ್ಳಿ, ಉಪಾಧ್ಯಕ್ಷ ಹಾಲೇಶ ಸೂಡಿ, ಕಾರ್ಯದರ್ಶಿಗಳು ಹಾಲಪ್ಪ ಹರ್ತಿ, ರವಿ ಸಂಶಿ ಸೇರಿದಂತೆ ಸದಸ್ಯರು, ಮಹಿಳೆಯರು ಮತ್ತು ಯುವಕರು ಶ್ರಮಿಸುತ್ತಿದ್ದಾರೆ.

> "ಜಾತಿ, ಮತ, ಪಂಥ ಭೇದವಿಲ್ಲದೆ ಸಮಸಮಾಜ ನಿರ್ಮಾಣದ ಸಂದೇಶ ಸಾರುವ ಉತ್ಸವ ಇದಾಗಿದೆ. ರೊಟ್ಟಿ ಜಾತ್ರೆಯ ಮೂಲಕ ಭಾವೈಕ್ಯತೆ ಬೆಳೆಸುವ ಪ್ರಯತ್ನ ಮಾಡಲಾಗಿದೆ."
>
> – **ಶ್ರೀ ಹಾಲೇಶ್ವರ ಶಿವಶರಣರು.**

### ಮೊದಲ ಬಾರಿಗೆ ರೊಟ್ಟಿ ಜಾತ್ರೆ ವಿಶೇಷ

ಈ ಬಾರಿ ಜಾತ್ರೆಯ ವಿಶೇಷವಾಗಿ ಪ್ರಥಮ ಬಾರಿಗೆ ರೊಟ್ಟಿ ಜಾತ್ರೆ ಆಯೋಜಿಸಲಾಗಿದ್ದು, ಜಾತಿ-ಮತ ಭೇದ ತೊರೆದು ಭಾವೈಕ್ಯತೆ ಮೂಡಿಸುವ ಉದ್ದೇಶ ಹೊಂದಿದೆ. ಸುಮಾರು 5 ಕ್ವಿಂಟಲ್ ಜೋಳದ ರೊಟ್ಟಿ, 4 ಕ್ವಿಂಟಲ್ ಬುಂದೆ, 3 ಕ್ವಿಂಟಲ್ ಜಿಲೇಬಿ ಹಾಗೂ ವಿವಿಧ ಆಹಾರ ಪದಾರ್ಥಗಳನ್ನು ಭಕ್ತರ ದಾಸೋಹಕ್ಕಾಗಿ ಸಿದ್ಧಪಡಿಸಲಾಗಿದೆ. ಪೇಠಾ ಆಲೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಜನರು ಸ್ವಯಂಪ್ರೇರಿತವಾಗಿ ರೊಟ್ಟಿಗಳನ್ನು ತಯಾರಿಸಿ ಮಠಕ್ಕೆ ತಂದು ನೀಡಿರುವುದು ವಿಶೇಷವಾಗಿದೆ.

## ಮಹಾವೀರರು ಶಾಂತಿ-ಅಹಿಂಸೆಯ ಸಂದೇಶ ಸಾರಿದ ಮಹಾನ್ ತಪಸ್ವಿ

### ಜೈನ್ ಸಮುದಾಯದಿಂದ ಮಹಾವೀರ ಜಯಂತಿ ಸರಳ ಆಚರಣೆ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಪಟ್ಟಣದ ಜೈನ್ ಸಮುದಾಯದಿಂದ ಮಹಾವೀರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಜೈನ ಧರ್ಮದ ಮಹಾನ್ ತೀರ್ಥಂಕರರಾದ ಮಹಾವೀರ ಅವರ ಜಯಂತಿ ಅಂಗವಾಗಿ ನಡೆದ ಮೆರವಣಿಗೆ ಕಾರ್ಯಕ್ರಮದಲ್ಲಿ ಶಾಸಕ ಕೆ. ನೇಮಿರಾಜ ನಾಯ್ಕ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಾವೀರ ಅವರು ಶಾಂತಿ, ಅಹಿಂಸೆ ಮತ್ತು ಸತ್ಯದ ಮೂಲಕ ಲೋಕಕ್ಕೆ ಶಾಶ್ವತ ಸಂದೇಶ ನೀಡಿದ ಮಹಾನ್ ತಪಸ್ವಿ ಎಂದು ಹೇಳಿದರು.

ತಮ್ಮ ವೈಯಕ್ತಿಕ ಸುಖವನ್ನು ತ್ಯಜಿಸಿ ಲೋಕಕಲ್ಯಾಣಕ್ಕಾಗಿ ಬದುಕಿದ ಅವರ ಜೀವನ ಪ್ರತಿಯೊಬ್ಬರಿಗೂ ಆದರ್ಶವಾಗಬೇಕು ಎಂದು ಅಭಿಪ್ರಾಯಪಟ್ಟರು.

ನಂತರ ಜೈನ್ ಮುನಿಗಳ ಮೆರವಣಿಗೆ ಜೈನ ಮಂದಿರದಿಂದ ಆರಂಭವಾಗಿ ಪ್ರಮುಖ ರಸ್ತೆಗಳ ಮೂಲಕ ಬಸವೇಶ್ವರ ವೃತ್ತ ತಲುಪಿ, ಮರಳಿ ದೇವಸ್ಥಾನಕ್ಕೆ ಆಗಮಿಸಿತು. ಬಳಿಕ ಮುನಿಗಳಿಂದ ಸಮುದಾಯದವರಿಗೆ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜೈನ್ ಸಮುದಾಯದ ತಾಲೂಕು ಅಧ್ಯಕ್ಷ ಕಾಂತಿಲಾಲ್ ಜೈನ್, ಮಹಾವೀರರ ತತ್ವಗಳು ಶಾಂತಿ ಮತ್ತು ಸೌಹಾರ್ದತೆಗೆ ಇಂದು ಕೂಡ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಮೃತ್ಯುಂಜಯ (ಮುತ್ತಣ್ಣ), ಮಹೇಂದ್ರಿ ಮಹಾವೀರ್, ಸಜ್ಜನ್, ದಿನೇಶ್ ದಾರಿವಾಲ್, ರಾಜು ಬೈ, ಕಾಂತಿಲಾಲ್ ಲುಕ್ಡ್, ಮದನ್ ಲಾಲ್ ದಾರಿವಾಲ್, ಅಶೋಕ್ ಜೈನ್, ವಿಮಲ್ ಜೈನ್, ಕಪಿಲ್ ಜೈನ್ ಹಾಗೂ ಮಹಾವೀರ್ ಜೈನ್ ಸೇರಿದಂತೆ ಸಮುದಾಯದ ಯುವ ಘಟಕದ ಅಧ್ಯಕ್ಷ ಮುಖೇಶ್ ಚೋಪ್ರಾ ಮತ್ತು ಹಲವರು ಉಪಸ್ಥಿತರಿದ್ದರು.



### ಬೇಸಿಗೆ ನೀರಿನ ಅರವಟ್ಟಿಗೆ ಉದ್ಘಾಟನೆ

ಮಹಾವೀರ ಮಹಿಳಾ ಸೇವಾ ಸಂಘದ ವತಿಯಿಂದ ಜೈನ್ ದೇವಸ್ಥಾನದ ಹತ್ತಿರ ಸಾರ್ವಜನಿಕರಿಗಾಗಿ ಬೇಸಿಗೆ ಕಾಲದ ಕುಡಿಯುವ ನೀರಿನ ಅರವಟ್ಟಿಗೆಯನ್ನು ಶಾಸಕ ಕೆ. ನೇಮಿರಾಜ ನಾಯ್ಕ ಉದ್ಘಾಟಿಸಿದರು.

## ನರಗುಂದ ಪುರಸಭೆಯಿಂದ ಸಾರ್ವಜನಿಕರಿಗೆ ಸೂಚನೆ

■ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ಪುರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು ಹಾಗೂ ಅನುಭೋಗದಾರರಿಗೆ 2026-27ನೇ ಸಾಲಿನ ಆಸ್ತಿ ತೆರಿಗೆ ದರಗಳನ್ನು ಪರಿಷ್ಕರಿಸಲಾಗಿದೆ ಎಂದು ಪುರಸಭೆ ಪ್ರಕಟಣೆ ತಿಳಿಸಿದೆ.

ಪರಿಷ್ಕೃತ ದರಗಳ ಪ್ರಕಾರ ಖಾಲಿ ನಿವೇಶನಗಳಿಗೆ ಶೇ. 4, ವಸತಿ ಕಟ್ಟಡಗಳಿಗೆ ಶೇ. 4 ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಡಗಳಿಗೆ ಶೇ. 5 ರಂತೆ ತೆ-ರಿಗೆ ವಿಧಿಸಲಾಗುತ್ತದೆ. ಎಪ್ರಿಲ್ 1ರಿಂದ ಎಪ್ರಿಲ್ 30ರವರೆಗೆ ತೆರಿಗೆ ಪಾವತಿಸಿದರೆ ಶೇ. 5 ರಿಯಾಯಿತಿ ಲಭ್ಯವಿದೆ. ಮೇ 1ರಿಂದ ಜೂನ್ 30ರವರೆಗೆ ದಂಡವಿಲ್ಲದೆ ತೆರಿಗೆ ಪಾವತಿಸಬಹುದು. ಜುಲೈ 1ರಿಂದ ಬಾಕಿ ಇರುವ ತೆರಿಗೆ ಮೇಲೆ ಪ್ರತಿ ತಿಂಗಳು ಶೇ. 2ರಷ್ಟು ದಂಡ ವಿಧಿಸಲಾಗುತ್ತದೆ. ಸಾರ್ವಜನಿಕರು ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸಿ ನರಗುಂದ ಪಟ್ಟಣದ ಅಭಿವೃದ್ಧಿಗೆ ಸಹಕರಿಸುವಂತೆ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯಶಸ್ವಿಯಾಗಿ ಪೂರ್ಣಗೊಂಡ ಎಸ್.ಎಸ್.ಎಲ್.ಸಿ. ಪರೀಕ್ಷೆ-1

■ವಿಜಯಸಾಕ್ಷಿ ಸುದ್ದಿ, ಗದಗ

2026 ರ ಎಸ್.ಎಸ್.ಎಲ್.ಸಿ. ಪರೀಕ್ಷೆ-1 ಮಾರ್ಚ್ 31ರಂದು ಯಶಸ್ವಿಯಾಗಿ ನಡೆಯಿತು. ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಸಕಾಲದಲ್ಲಿ ಭಾಷೆ-3 ವಿಷಯದ ಪರೀಕ್ಷೆ ಆಯೋಜನೆ ಮಾಡಲಾಗಿತ್ತು. ಪರೀಕ್ಷೆಯ ಸಮಗ್ರ ನಿರ್ವಹಣೆಗೆ ಜಿಲ್ಲಾಧಿಕಾರಿಗಳು ನೇಮಕ ಮಾಡಿದ ವೀಕ್ಷಕರು ಮತ್ತು ಉಪನಿರ್ದೇಶಕರ ಕಚೇರಿಯಿಂದ ನೇಮಕಗೊಂಡ ಜಿಲ್ಲಾ ವೀಕ್ಷಕ ದಳ ಹಾಗೂ ಸ್ಥಳೀಯ ಜಾಗೃತ ದಳದ ಅಧಿಕಾರಿಗಳು ಪ್ರತಿ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದರು.

ನಿಗದಿತ ಸಮಯದಲ್ಲಿ ಪ್ರಶ್ನೆಪತ್ರಿಕೆಗಳು ಕೇಂದ್ರಗಳಿಗೆ ಸುರಕ್ಷಿತವಾಗಿ ತಲುಪಿಸಿ, ಪರೀಕ್ಷೆಯ ನಂತರ ಉತ್ತರಪತ್ರಿಕೆಗಳನ್ನು ಪೊಲೀಸ್ ಬಿಗಿ ಬಂದೋಬಸ್ತದೊಳಗೆ ಭದ್ರತೆಯೊಂದಿಗೆ ಸಂಗ್ರಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಜೈನ ಧರ್ಮ ಅತ್ಯಂತ ಕೋಮಲ ಹೃದಯವಿದ್ದಂತೆ!



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಜೈನ ಧರ್ಮ ಅತ್ಯಂತ ಕೋಮಲವಾದ ಹೃದಯವಿದ್ದಂತೆ ಎಂದು ಆರ್.ಎನ್. ದೇಶಪಾಂಡೆ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಆರ್.ಎಂ. ಕಲ್ಲನಗೌಡರು ಹೇಳಿದರು.

ಪಟ್ಟಣದ ನಾಗರಾಜ ದೇಶಪಾಂಡೆ ಅವರ ವಾಡಿಯಲ್ಲಿ ಜರುಗಿದ ಭಗವಾನ್ ಶ್ರೀ 1008 ಮಹಾವೀರ ತೀರ್ಥಂಕರರ ಜನ್ಮಕಲ್ಯಾಣೋತ್ಸವ ನಿಮಿತ್ತ, ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಭಗವಾನ್ ಮಹಾವೀರರು "ಬದುಕು ಹಾಗೂ ಇತರರನ್ನು ಬದುಕಲು ಬಿಡು" ತತ್ವವನ್ನು ಸಿದ್ಧಾಂತ ಪರಿಪಾಲಕರು, ಶಾಂತಿ, ಅಹಿಂಸಾ, ಸಹೋದರತ್ವ, ಆಸೆ ಆಕಾಂಕ್ಷೆ ಮೀರಿದವರು, ಕ್ಷಮಾ ಗುಣ, ತಮ್ಮನ್ನು ತಾವು ನಿಯಂತ್ರಣಗೊಳಿಸುವುದು, ಕಠಿಣ ವೃತ್ತಿ ಪರಿಪಾಲಕರು, ಮತ್ತೊಂದು ಧರ್ಮವನ್ನು ಗೌರವಿಸಿದವರು, ಮನುಷ್ಯತ್ವವನ್ನು ಪರಿಪಾಲನೆ ಮಾಡಿದವರು ಎಂಬುದಾಗಿ ವಿವರಿಸಿದರು.

ಇಂತಹ ಮಹನೀಯರ ಆದರ್ಶಗಳು ಇಂದಿನ ಯುವಕರಿಗೆ ಮಾದರಿಯಾಗಿದ್ದು, ಜೈನ ಧರ್ಮದ ಪರಿಪಾಲನೆಯಿಂದ ಶಾಂತಿ, ಅಹಿಂಸಾ ತತ್ವವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ನಾಗರಾಜ ದೇಶಪಾಂಡೆ ಮಾತನಾಡಿ, ಜೈನ ಧರ್ಮ ಯಾವಾಗಲೂ ಶಾಂತಿ, ಅಹಿಂಸಾ ಪರಿಪಾಲನೆ ಮಾಡುತ್ತಾ ತಮ್ಮ ಜೀವನ ಸಾಗಿಸುತ್ತಾ ಬಂದಿದ್ದು, ಇಂದು ಧರ್ಮದ ಸಾರ ಮರೆತರೆ ನಾವೂ ಎಲ್ಲರೂ ಅನಾರೋಗ್ಯಕ್ಕೆ ತುತ್ತಾಗುತ್ತೇವೆ, ಆದ್ದರಿಂದ ಧರ್ಮ ಪರಿಪಾಲನೆ ಇಂದಿನ ಸಮಯಕ್ಕೆ ಅತ್ಯಂತ ಸೂಕ್ತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಎಸ್.ಸಿ. ಚವಡಿ, ಎಸ್.ಸಿ. ಬಡ್ನಿ, ಬಿ.ಎಂ. ಹರಪನಹಳ್ಳಿ, ಇಮಾಮಾಸಾಬ ಶೇಖ್, ಮಹಾದೇವಪ್ಪ ಹುಬ್ಬಳ್ಳಿ, ಮಂಜುನಾಥ ಮಟ್ಟಿ, ನಾಗರಾಜ ದೇಶಪಾಂಡೆ ಇದ್ದರು.

## ತಂಬಾಕು ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ: 52 ಪ್ರಕರಣಗಳಲ್ಲಿ ದಂಡ



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ತಂಬಾಕು ನಿಯಂತ್ರಣಕ್ಕೆ ಸಂಬಂಧಿಸಿದ ಕೋಟ್ಪಾ ಕಾಯ್ದೆ ಉಲ್ಲಂಘನೆ ವಿರುದ್ಧ ಜಿಲ್ಲಾ ಆಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಮಾರ್ಚ್ 2026ರಲ್ಲಿ ಡಾ. ವೈ.ಕೆ. ಭಜಂತ್ರಿ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕು ತನಿಖಾ ದಳ, ಪೊಲೀಸ್ ಇಲಾಖೆ ಹಾಗೂ ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಗದಗ ನಗರ, ನರಸಾಪುರ, ಶಿರಹಟ್ಟಿ ತಾಲೂಕಿನ ಸೂರಣಗಿ, ನರಗುಂದ, ಮುಂಡರಗಿ ತಾಲೂಕಿನ ಡಂಬಳ ಹಾಗೂ ರೋಣ ಪಟ್ಟಣಗಳಲ್ಲಿ ದಾಳಿ ನಡೆಸಲಾಯಿತು.

ಈ ವೇಳೆ ತಂಬಾಕು ನಿಯಂತ್ರಣ ಕಾಯ್ದೆ 2003 (ಕೋಟ್ಪಾ) ಉಲ್ಲಂಘನೆ ಪ್ರಕರಣಗಳಲ್ಲಿ ಒಟ್ಟು 52 ಪ್ರಕರಣಗಳನ್ನು ದಾಖಲಿಸಿ 25,050 ದಂಡ ವಿಧಿಸಲಾಗಿದೆ. ಜೊತೆಗೆ ಮಾರಾಟಗಾರರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಕೋಟ್ಪಾ ಕಾಯ್ದೆಯ ಸೆಕ್ಷನ್ 4 ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಹಾಗೂ ಉಗುಳುವುದು ನಿಷೇಧವಾಗಿದ್ದು, ಉಲ್ಲಂಘನೆಗೆ 1000 ದಂಡ ವಿಧಿಸಲಾಗುತ್ತದೆ. ಸೆಕ್ಷನ್ 6ಎ ಪ್ರಕಾರ 21 ವರ್ಷದೊಳಗಿನವರಿಗೆ ತಂಬಾಕು ಉತ್ಪನ್ನ ಮಾರಾಟ ನಿಷೇಧವಾಗಿದೆ. ಸೆಕ್ಷನ್ 6ಬಿ ಅನ್ವಯ ಶಾಲೆ-ಕಾಲೇಜುಗಳ ಸುತ್ತ 100 ಅಡಿ ವ್ಯಾಪ್ತಿಯಲ್ಲಿ ತಂಬಾಕು ಮಾರಾಟ ನಿಷೇಧಿಸಲಾಗಿದೆ. ಕೆಲವು ಸ್ಥಳಗಳಲ್ಲಿ ಈ ನಿಯಮ ಉಲ್ಲಂಘನೆ ಕಂಡುಬಂದ ಹಿನ್ನೆಲೆಯಲ್ಲಿ ಅಂತಹ ಅಂಗಡಿಗಳ ವಿರುದ್ಧ ದಂಡ ವಿಧಿಸಿ, ಅಂಗಡಿಗಳನ್ನು ಮುಚ್ಚುವ ಕ್ರಮ ಕೈಗೊಳ್ಳಲಾಯಿತು. ಪಾನ್-ಬೀಡಾ ಅಂಗಡಿಗಳು ಹಾಗೂ ಹೋಟೆಲ್‌ಗಳಲ್ಲಿ ಅನಧಿಕೃತ ಧೂಮಪಾನ ಅಡ್ಡೆಗಳು ನಿರ್ಮಾಣವಾಗಿರುವುದು ಗಮನಕ್ಕೆ ಬಂದಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನದಿಂದ ಇತರರು ಪರೋಕ್ಷ ಧೂಮಪಾನಿಗಳಾಗಿ ಕ್ಯಾನ್ಸರ್, ಹೃದಯ ರೋಗ ಸೇರಿದಂತೆ ಗಂಭೀರ ಕಾಯಿಲೆಗಳಿಗೆ ಒಳಗಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಸೆಕ್ಷನ್ 4 ಹಾಗೂ 6ಎ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ನಿಯಮ ಉಲ್ಲಂಘನೆ ಮುಂದುವರಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

ಈ ದಾಳಿಯಲ್ಲಿ ಜಿಲ್ಲಾ ಸಲಹೆಗಾರ ಗೋಪಾಲ ಸುರಪುರ, ರಾಜೇಂದ್ರ ಗಡಾದ, ಸಿ.ಆರ್. ಹಾದಿಮನಿ, ಪ್ರಕಾಶ ಕರ್ಜಗಿ, ಮಂಜುಳಾ ಸಜ್ಜನ್, ಐ.ಆರ್. ಗಂಜಿ, ಎಸ್.ಆರ್. ದೇಸಾಯಿ, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಸಿ.ಕುಂಬಾರ ಸೇರಿದಂತೆ ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ನಾಟಕ ಪರಂಪರೆಗೆ ಅಭಿನಯ ರಂಗದ ಕೊಡುಗೆ ಅಪಾರ

## ಕಸಾಪದಿಂದ ವಿಶ್ವ ರಂಗಭೂಮಿ ದಿನಾಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ರಂಗಭೂಮಿ ಬೆಳವಣಿಗೆಯ ಹಿನ್ನೆಲೆಯಲ್ಲಿ ಗದಗ ಪರಿಸರದ ಕೊಡುಗೆ ಅಪಾರವಾದುದು. ಶಾಂತಕವಿಗಳು ಉತ್ತರ ಕರ್ನಾಟಕದ ಪ್ರಥಮ ನಾಟಕ ಮಂಡಳಿಯನ್ನು ಸ್ಥಾಪಿಸಿ ಮರಾಠಿ ಪ್ರಾಬಲ್ಯವನ್ನು ಕಡಿಮೆಗೊಳಿಸುವುದರ ಜೊತೆ-ಗೆ ನಾಟಕವನ್ನು ಬದುಕಿನ ಭಾಗವಾಗಿಸಿದರು. ಅದರ ಮುಂದುವರಿಕೆಯಾಗಿ ಅಭಿನಯರಂಗ ಸಂಸ್ಥೆ ಹವ್ಯಾಸಿ ಕಲಾವಿದರರನ್ನು ಒಗ್ಗೂಡಿಸಿ ನಾಟಕ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು ಎಂದು ನಟ, ನಿರ್ದೇಶಕ ಸುಶೀಲೇಂದ್ರ ಜೋಶಿ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಗದಗ ವತಿಯಿಂದ ತೋಂಟದ ಸಿದ್ಧಲಿಂಗಶ್ರೀ ಕನ್ನಡ ಭವನ, ಕಸಾಪ ಕಾರ್ಯಾಲಯ ಗದಗದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿನಯರಂಗ ಸಂಸ್ಥೆ ನಾಟಕದ ಜೊತೆಗೆ ಸಾಹಿತ್ಯ, ಸಂಗೀತ, ಸಂವಾದಗಳ ಮೂಲಕ ವಿವಿಧ ಅಭಿರುಚಿಯ ಜನರನ್ನು ತಲುಪುವ ಕಾರ್ಯವನ್ನು ಮಾಡಿತು. ಅನೇಕ ಕಲಾವಿದರು ನಾಡಿನ ಬೇರೆ ಬೇರೆ ಭಾಗಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಇಂದಿನ ಪೀಳಿಗೆ ಅಭಿನಯ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಂಸ್ಕೃತಿ ಚಿಂತಕ ಡಾ. ಜಿ.ಬಿ.ಪಾಟೀಲ ಮಾತನಾಡಿ, ರಂಗಭೂಮಿಗೆ ಗದುಗಿನ ಕೊಡುಗೆ ಅಪಾರವಾದುದು.

ಅಭಿನಯರಂಗದ ಮೂಲಕ ಅನೇಕ ಪ್ರಯೋಗಗಳನ್ನು ನಡೆಸಿ ರಂಗಾಸಕ್ತರ ಮನತಣಿಸಿದ ಕೀರ್ತಿ ಇದರದ್ದಾಗಿದೆ. ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ ನಾಟಕ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸೂಕ್ತ ಯೋಜನೆ ರೂಪಿಸಿ ಮುಂದುವರೆಯೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಭಿನಯರಂಗದ ಕಲಾವಿದರು, ಸಂಘಟಕರಾದ ಅರವಿಂದ ಹುಯಿಲಗೋಳಕರ, ರುದ್ರಣ್ಣ ಗುಳಗುಳಿ, ಎಸ್.ಬಿ.ಗೌಡರ, ಆರ್.ಆರ್.ಜೋಶಿ, ಲಿಂಗರಾಜ ಬಗಲಿ, ಬಿ.ಬಿ.ತೋಟಗೇರ, ಕೆ.ಆರ್.ಗುಡಿಹಾಳ, ಸುಶೀಲೇಂದ್ರ ಜೋಶಿ, ಡಾ. ಜಿ.ಬಿ.ಪಾಟೀಲ ಅವರನ್ನು ಪರಿಷತ್ತಿನ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರೊ. ಕೆ.ಎಚ್.ಬೇಲೂರ, ಸುರೇಶ ಕುಂಬಾರ, ಸಿ ಎಂ ಮಾರನಬಸರಿ, ಅಶೋಕ ಸತರಡ್ಡಿ, ಡಾ. ಬಿ ಬಿ ಹೊಳಗುಂದಿ, ಸತೀಶಕುಮಾರ ಚನ್ನಪ್ಪಗೌಡರ, ಶೈಲಜಾ ಗಿಡ್ನಂದಿ, ಅರಾಜಶೇಖರ ಕರಡಿ, ಸಿದ್ಧಲಿಂಗೇಶ ಸಜ್ಜನಶೆಟ್ಟರ, ಷಡಕ್ಷರಿ ಮೆಣಸಿನಕಾಯಿ, ಜಿ.ಐ.ಮುಜಾವರ, ರಕ್ಷಿತಾ ಗಿಡ್ನಂದಿ, ಅನಸೂಯಾ ಮಿಟ್ಟಿ, ಅಜಿತ ಘೋರ್ಪಡೆ, ರತ್ನಾ ಪುರಂತರ, ಪಿ.ವಿ.ಇನಾಮದಾರ, ಗಿರೀಶ ಪಂತರ, ವಿಶ್ವನಾಥ ಬೇಂದ್ರೆ, ಬೂದಪ್ಪ ಅಂಗಡಿ, ಬಿ.ವಾಯ್. ಡೊಳ್ಳಿನ, ವೆಂಕಟೇಶ ಗುಡಿ, ಸತೀಶ ಕುಲಕರ್ಣಿ, ರವೀಂದ್ರ ಜೋಶಿ, ಪ್ರಶಾಂತ ಕನಾಜ, ಶಶಿಕಾಂತ ಕೊರ್ಲಹಳ್ಳಿ, ಎಸ್.ಸಿ.ಹಾಳಕೇರಿ, ಎಸ್.ಎ.ದೇಶಪಾಂಡೆ, ಎಸ್. ಎಸ್.ಸರ್ವಿ, ರಾಜೇಶ್ವರಿ ಗುಳಗುಳಿ, ಅಶೋಕ ಸುತಾರ, ಮಲ್ಲೇಶಗೌಡ್ರ ತಿಮ್ಮನಗೌಡ್ರ, ಮೊದಲಾದವರು ಉಪಸ್ಥಿತರಿದ್ದರು.

> "ವೃತ್ತಿಪರ ಹಾಗೂ ಹವ್ಯಾಸಿ ರಂಗಭೂಮಿಯ ತವರೂರಾಗಿ ಗದುಗಿನ ಪರಿಸರ ಪ್ರಸಿದ್ಧಿಯಾಗಿದೆ. ರಂಗ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಕಲಾ ಸಂಘಟನೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕು. ಮಕ್ಕಳಿಗೆ ರಂಗಕಲೆಗಳನ್ನು ಕಲಿಸಿಕೊಡುವ ಮೂಲಕ ಹೊಸ ತಲೆಮಾರಿನ ಕಲಾವಿದರನ್ನು ರೂಪಿಸಬೇಕಾಗಿದೆ."
>
> – **ವಿವೇಕಾನಂದಗೌಡ ಪಾಟೀಲ,** ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್

## ಶಿಕ್ಷಕರ ವೃತ್ತಿ ಅತ್ಯಂತ ಪವಿತ್ರವಾದದ್ದು: ಎಲ್.ಎ. ನಡುವಿನಮನಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಶಿಕ್ಷಕರ ವೃತ್ತಿ ಅತ್ಯಂತ ಪವಿತ್ರವಾದದ್ದು ಎಂದು ಪ್ರಧಾನ ಗುರುಮಾತೆ ಎಲ್.ಎ. ನಡುವಿನಮನಿ ಹೇಳಿದರು.

ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ಸಹ ಶಿಕ್ಷಕಿ ಎಸ್.ಎಚ್. ಉಪ್ಪಾರ ಅವರ ಬಿಳ್ಕೋಡುಗೆ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಶಿಕ್ಷಕ ವೃತ್ತಿ ಪೂರ್ವ ಜನ್ಮದ ಪುಣ್ಯದ ಫಲವಾಗಿ ದೊರೆಯುವ ಹುದ್ದೆಯಾಗಿದ್ದು, ಈ ಹುದ್ದೆಯಿಂದ ಅನೇಕ ಮಕ್ಕಳ ಭವಿಷ್ಯ ರೂಪಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಎಲ್ಲಾ ವೃತ್ತಿಗಳಿಗೆ ಶಿಕ್ಷಕರೇ ಮೂಲ ಆಧಾರಸ್ತಂಭವಾಗಿದ್ದು, ನಿವೃತ್ತಿ ಸಹಜ ಪ್ರಕ್ರಿಯೆಯಾಗಿದ್ದು, ಅವರ ಮುಂದಿನ ಜೀವನ ಉಜ್ವಲವಾಗಲಿ ಎಂದು ಶುಭಹಾರೈಸಿದರು.

ಸಹ ಶಿಕ್ಷಕಿ ವಿ.ಎಂ. ಕಂಠಿ ಮಾತನಾಡಿ, ಎಸ್.ಎಚ್. ಉಪ್ಪಾರ ಅವರು ತಾಯಿ ಸ್ಥಾನದಲ್ಲಿ ಎಲ್ಲರಿಗೂ ಮಾರ್ಗದರ್ಶನ ನೀಡಿದವರು. ಇಂತಹ ಗುರುಮಾತೆಯೊಂದಿಗೆ ಕಾರ್ಯನಿರ್ವಹಿಸುವ ಅವಕಾಶ ನಮಗೆ ಸಿಕ್ಕಿದ್ದು ಸುದೈವವಾಗಿದೆ ಎಂದು ಹೇಳಿದರು.

ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ವೃತ್ತಿಗೆ ಗೌರವ ಹೆಚ್ಚುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಪಿ.ಬಿ. ಕೆಂಚನಗೌಡರ, ಎಂ.ಎ. ಮೇಗಲಮನಿ, ಎಂ.ಎ. ಕೊಪ್ಪಳ, ಕೆ.ಎಂ. ಹೆರಕಲ್, ವಿ.ಡಿ. ಸಿದ್ದನಗೌಡರ, ಎಚ್.ಆರ್. ಭಜಂತ್ರಿ, ಎಸ್.ವಿ. ಹಿರೇಮಠ, ಎಸ್.ಡಿ. ಪಂಡಿತ, ಟಿ. ವೀಣಾ, ರತ್ನಾ ಬಬಲಿ, ಶೈಲಾ ದೊಡ್ಡಮನಿ, ತ್ರಿವೇಣಿ ಬಡ್ನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ವಂದೇ ಭಾರತ ಸೇರಿ ಹಲವು ರೈಲುಗಳ ಸಂಚಾರಕ್ಕೆ ಗದಗ ಜಿಲ್ಲಾ ವಿಕಾಸ ವೇದಿಕೆ ಮನವಿ

# ಸೊಲ್ಲಾಪೂರ-ಗದಗ ಡಬ್ಲಿಂಗ್ ಮಾರ್ಗ: ಗದಗ ಮೂಲಕ ಹೊಸ ರೈಲುಗಳಿಗೆ ಆಗ್ರಹ






ವಂದೇ ಭಾರತ ಸೇರಿದಂತೆ ಬಾಗಲಕೋಟೆ-ಮೈಸೂರು, ವಿಜಯಪುರ-ತಿರುಪತಿ, ಮುಂಬೈ-ಬೆಂಗಳೂರು, ಮುಂಬೈ-ಚೆನ್ನೈ, ಪುಣೆ-ರಾಮೇಶ್ವರಂ, ವಿಜಯಪುರ-ಬೆಂಗಳೂರು, ವಿಜಯಪುರ-ವಿಜಯವಾಡ, ವಿಜಯಪುರ-ರಾಯಚೂರು, ಬಳ್ಳಾರಿ-ಶಿರಡಿ ಹಾಗೂ ಅಹಮದಾಬಾದ್-ಬೆಂಗಳೂರು ರೈಲುಗಳನ್ನು ಗದಗ ಮಾರ್ಗವಾಗಿ ಸಂಚರಿಸಲು ಅವಕಾಶ ನೀಡುವಂತೆ ಆಗ್ರಹಿಸಲಾಗಿದೆ.

■ವಿಜಯಸಾಕ್ಷಿ ಸುದ್ದಿ, ಗದಗ

ಸೊಲ್ಲಾಪೂರ-ಗದಗ ಡಬ್ಲಿಂಗ್ ಮಾರ್ಗ ಪೂರ್ಣಗೊಂಡ ಬಳಿಕ ಗದಗ ಮೂಲಕವೇ ಹೊಸ ರೈಲುಗಳನ್ನು ಸಂಚರಿಸಲು ಅವಕಾಶ ಕಲ್ಪಿಸಬೇಕು ಎಂದು ಗದಗ ಜಿಲ್ಲಾ ವಿಕಾಸ ವೇದಿಕೆಯಿಂದ ರೈಲ್ವೆ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಈ ಕುರಿತು ಮಾತನಾಡಿದ ಜಿಲ್ಲಾ ವಿಕಾಸ ವೇದಿಕೆ ಅಧ್ಯಕ್ಷ ವಿಶ್ವನಾಥ ಖಾನಾಪೂರ, ಗದಗ-ಸೊಲ್ಲಾಪೂರ ಡಬ್ಲಿಂಗ್ ಕಾಮಗಾರಿಯೊಂದಿಗೆ ಈ ಭಾಗದ ಸಂಚಾರ ವ್ಯವಸ್ಥೆ ಇನ್ನಷ್ಟು ಸುಧಾರಿಸಲಿದೆ. ಗದಗ, ಕೊಪ್ಪಳ, ಹೊಸಪೇಟೆ ಮತ್ತು ಬಳ್ಳಾರಿ ಭಾಗದ ಜನರಿಗೆ ಪ್ರಯಾಣ ಸುಲಭವಾಗಲಿದೆ ಎಂದು ಹೇಳಿದರು.

ಉದ್ಯೋಗಾರ್ಥಿಗಳು, ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಪ್ರವಾಸೋದ್ಯಮಕ್ಕೆ ಈ ರೈಲುಗಳು ದೊಡ್ಡ ಮಟ್ಟದಲ್ಲಿ ಸಹಕಾರಿ ಆಗಲಿವೆ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ಹೊಸಪೇಟೆ, ಕೊಪ್ಪಳ ಹಾಗೂ ಗದಗವನ್ನು ಬಾದಾಮಿ-ಬಾಗಲಕೋಟೆ ಮಾರ್ಗದ ಮೂಲಕ ವಿಜಯಪುರಕ್ಕೆ ಸಂಪರ್ಕಿಸುವುದು ಅತ್ಯಂತ ಮಹತ್ವದ್ದಾಗಿದೆ.

ಹಂಪಿ ಯುನೆಸ್ಕೋ ವಿಶ್ವ ಪರಂಪರೆ ತಾಣ ಹಾಗೂ ಬಾದಾಮಿಯ ಐತಿಹಾಸಿಕ ಗುಹಾಂತರ ದೇವಾಲಯಗಳಿಗೆ ಪ್ರವಾಸಿಗರು ಸುಲಭವಾಗಿ ಭೇಟಿ ನೀಡಲು ಇದು ನೆರವಾಗಲಿದೆ ಎಂದು ಹೇಳಿದ್ದಾರೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಗೆ ಪ್ರಯಾಣಿಸುವ ಜನರಿಗೆ ಈ ರೈಲುಗಳು ಹೆಚ್ಚಿನ ಅನುಕೂಲ ಒದಗಿಸಲಿವೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ರೈಲ್ವೆ ಸಚಿವ ವಿ. ಸೋಮಣ್ಣ ಹಾಗೂ ನೈಋತ್ಯ ರೈಲ್ವೆ ಇಲಾಖೆಯವರು ಈ ಭಾಗದ ಜನರ ಬೇಡಿಕೆಯನ್ನು ಪರಿಗಣಿಸಿ ಗದಗ ಮೂಲಕ ರೈಲು ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು ಎಂದು ಮನವಿ ಮಾಡಲಾಗಿದೆ.

ಈ ಸಂದರ್ಭದಲ್ಲಿ ಶಿವಕುಮಾರ ಹಡಗಲಿಮಠ, ವೆಂಕಟೇಶ ಕಬಾಡಿ, ಜಗದೀಶ ಕಂಗೋರಿ, ನಾಗರಾಜ ಹಂದಿಗೋಳ ಸೇರಿದಂತೆ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು.

### ವಿಶೇಷ ಮಕ್ಕಳ ನಡುವೆ ಹುಟ್ಟುಹಬ್ಬ ಆಚರಿಸಿಕೊಂಡ ಪ್ರೀತಿ ಹೊನ್ನಗುಡಿ

# ಸೇವೆಯೇ ಜೀವನದ ಸಾರ್ಥಕತೆ



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಬೆಟಗೇರಿಯ ಮಂಜು ಶಿಕ್ಷಣ ಸಂಸ್ಥೆಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆಯಲ್ಲಿ ಶ್ರೀಮತಿ ಪ್ರೀತಿ ಹೊನ್ನಗುಡಿ ಅವರ 40ನೇ ವರ್ಷದ ಹುಟ್ಟುಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಬಿಜೆಪಿ ಮುಖಂಡರಾದ ಪ್ರೀತಿ ಹೊನ್ನಗುಡಿ ಅವರು, ಮಾನವಕುಲದಲ್ಲಿ ಜನಿಸಿದ ನಾವು ಸಮಾಜದ ದುರ್ಬಲರು ಹಾಗೂ ಪ್ರೀತಿಯಿಂದ ವಂಚಿತರಾದವರಿಗೆ ಸೇವೆ ಸಲ್ಲಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು. ಹುಟ್ಟುಹಬ್ಬವನ್ನು ಆಡಂಬರವಾಗಿ ಆಚರಿಸುವ ಬದಲು ಇಂತಹ ವಿಶೇಷ ಮಕ್ಕಳ ನಡುವೆ ಸೇವಾದಿನವಾಗಿ ಆಚರಿಸಿಕೊಳ್ಳುವುದರಿಂದ ಜೀವನ ಸಾರ್ಥಕವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಮಂಜು ಶಿಕ್ಷಣ ಸಂಸ್ಥೆ ಬುದ್ಧಿಮಾಂದ್ಯ ಮಕ್ಕಳಿಗಾಗಿ ಅಪಾರ ಸೇವಾಭಾವದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಅವರು ಕೊಂಡಾಡಿದರು. “ನಾವು ಬರಿಗೈಯಲ್ಲಿ ಬರುತ್ತೇವೆ, ಬರಿಗೈಯಲ್ಲೇ ಹೋಗುತ್ತೇವೆ. ಮಧ್ಯದಲ್ಲಿರುವ ಜೀವನವನ್ನು ಸಮಾಜ ಸೇವೆಗೆ ಮೀಸಲಿಡಬೇಕು” ಎಂದು ಪ್ರೀತಿ ಹೊನ್ನಗುಡಿ ಹೇಳಿದರು.

ಸಂಸ್ಥೆಯ ಅಧ್ಯಕ್ಷರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಬುದ್ಧಿಮಾಂದ್ಯ ಮಕ್ಕಳು ಶ್ರೀಮತಿ ಪ್ರೀತಿ ಹೊನ್ನಗುಡಿ ಹಾಗೂ ಶ್ರೀಮತಿ ಲಕ್ಷ್ಮಿ ಕಾಕಿ ಅವರನ್ನು ಸನ್ಮಾನಿಸಿದರು. ಬಳಿಕ ಪ್ರೀತಿ ಹೊನ್ನಗುಡಿ ಅವರು ಶಾಲೆಯ ಎಲ್ಲಾ ತರಗತಿಗಳಿಗೆ ಭೇಟಿ ನೀಡಿ ಮಕ್ಕಳೊಂದಿಗೆ ಮಾತನಾಡಿ ಅವರ ಸಂತೋಷದಲ್ಲಿ ಪಾಲ್ಗೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಜು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಶಂಕರಸಿಂಗ್ ರಜಪೂತ ವಹಿಸಿದ್ದರು. ಈ ಸಂದರ್ಭದಲ್ಲಿ ಪ್ರೇಮಾ ಹೊನ್ನಗುಡಿ, ಪ್ರಸನ್ನ ಹೊನ್ನಗುಡಿ, ಸಂಗಶಿ ನಿವೃತ್ತ ಶಿಕ್ಷಕಿಯರು, ವಿರೇಂದ್ರಸಿಂಗ್ ರಜಪೂತ (ಪ್ರಧಾನ ಗುರುಗಳು) ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರಸ್ತೆ ಅತಿಕ್ರಮಣ ವಿರೋಧಿಸಿ ಪ.ಪಂ ಮುತ್ತಿಗೆ: ತಕ್ಷಣ ತೆರವುಗೊಳಿಸಲು ಆಗ್ರಹ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಭೋವಿ ಓಣಿಯ ಶ್ರೀ ದುರ್ಗಾದೇವಿ ದೇವಸ್ಥಾನದ ಹತ್ತಿರದ ರಸ್ತೆಯನ್ನು ಕೆಲವರು ಅತಿಕ್ರಮಿಸಿಕೊಂಡು ಕಟ್ಟಡ ನಿರ್ಮಿಸಿರುವುದನ್ನು ವಿರೋಧಿಸಿ ಮಂಗಳವಾರ ಸಾರ್ವಜನಿಕರು ಪಟ್ಟಣ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಭೋವಿ ಓಣಿಯ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆಯನ್ನು ಅತಿಕ್ರಮಿಸಿಕೊಂಡು ಕಟ್ಟಡ ನಿರ್ಮಾಣ ಮಾಡಿರುವುದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಈ ಕುರಿತು ದಿ. 04-10-2025 ರಂದು ಮನವಿ ಸಲ್ಲಿಸಿದರೂ, ಪ.ಪಂ ಅಧಿಕಾರಿಗಳು ಕೇವಲ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ತಕ್ಷಣವೇ ಅಕ್ರಮ ಕಟ್ಟಡವನ್ನು ತೆರವುಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಪ.ಪಂ ಮುಖ್ಯಾಧಿಕಾರಿ ಮಲ್ಲೇಶ ಪಚ್ಚಿ ಮಾತನಾಡಿ, ಈಗಾಗಲೇ ಸ್ಥಳ ಪರಿಶೀಲನೆ ನಡೆಸಿ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಮತ್ತೊಮ್ಮೆ 3 ದಿನಗಳ ಗಡುವು ನೀಡಿ ನೋಟಿಸ್ ನೀಡಲಾಗುತ್ತದೆ. ಆ ಅವಧಿಯಲ್ಲಿ ಅಕ್ರಮ ಕಟ್ಟಡ ತೆರವುಗೊಳಿಸದಿದ್ದರೆ, ಪ.ಪಂ ವತಿಯಿಂದ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯಲ್ಲಪ್ಪ ಅಬ್ಬಿಗೇರಿ, ಚಿನ್ನಪ್ಪ ಮಾರನಬಸರಿ, ಹುಚ್ಚಪ್ಪ ನವಲಗುಂದ, ಮಾರುತಿ ಕಟ್ಟಿಮನಿ, ಯಮನೂರ ನಿಲುಗಲ್, ಸಂತೋಷ ಹನಮಸಾಗರ, ಯಲ್ಲಪ್ಪ ದೊಡ್ಡಮನಿ, ಜಗದೀಶ ಬಂಡಿವಡ್ಡರ, ರಾಜು ಕಟ್ಟಿಮನಿ, ರಘು ಕಟ್ಟಿಮನಿ, ಮಂಜು ಕಟ್ಟಿಮನಿ, ರಾಜು ಆದೋನಿ, ಮುಕಪ್ಪ ನಲಗುಂದ ಹಾಗೂ ಯಲ್ಲಪ್ಪ ಮಣ್ಣೊಡ್ಡರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಗಂಗೂಬಾಯಿ ಪವಾರ

# ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ಸ್ವಾವಲಂಬಿಗಳಾಗಿ



■ವಿಜಯಸಾಕ್ಷಿ ಸುದ್ದಿ, ಗದಗ

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಗಾದೆಗೆ ಅನುಗುಣವಾಗಿ, ಹೆಣ್ಣು ಮಕ್ಕಳು ವಿದ್ಯಾವಂತರಾಗಿದ್ದು ಸ್ವಾವಲಂಬಿಯಾಗಿ ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಿರಬೇಕು ಎಂದು ಶ್ರೀಮತಿ ಗಂಗೂಬಾಯಿ ಅ. ಪವಾರ ಅವರು ಹೇಳಿದರು.

ಮಳಗುಂದನಾಕಾ ಮರಾಠಾ ವಿದ್ಯಾವರ್ಧಕ ಸಂಘದ ಮರಾಠ ಸಮುದಾಯ ಭವನದಲ್ಲಿ ರಾಜಾಮಾತಾ ಜೀಜಾಬಾಯಿ ಮರಾಠಾ ಮಹಿಳಾ ಮಂಡಳಿಯ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಸರ್ವಕ್ಷೇತ್ರದಲ್ಲಿ ಸಾಧನೆ, ಹಾಗೂ ಮಕ್ಕಳ ಉತ್ತಮ ಸಂಸ್ಕೃತಿ ಬೆಳೆಸುವ ಬಗ್ಗೆ ಮನಮುಟ್ಟುವಂತೆ ಮಾರ್ಗದರ್ಶನ ನೀಡಿದರು.

ಇನ್ನೊಬ್ಬ ಅತಿಥಿ ಶ್ರೀಮತಿ ರಂಜನಾ ಕೋಟಿ ಮಾತನಾಡಿ, “ಮನಸ್ಸಿದ್ದರೆ ಮಾರ್ಗವಿದೆ” ಎಂಬ ತತ್ವದೊಂದಿಗೆ, ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ತಮ್ಮ ಶ್ರಮದಿಂದ ಯಶಸ್ಸು ಸಾಧಿಸಬಹುದೆಂದು ಪ್ರೇರೇಪಿಸಿದರು.

ಡಾ. ಅನ್ನಪೂರ್ಣಾ ಧನ್ನೂರ ಅವರು ಮಹಿಳಾ ಆರೋಗ್ಯ ಸಮಸ್ಯೆಗಳ ಬಗ್ಗೆ ಉಪಯುಕ್ತ ಮಾಹಿತಿ ಮತ್ತು ಸಲಹೆಗಳನ್ನು ನೀಡಿದರು.

ಸಭೆಯ ಅಧ್ಯಕ್ಷೆ ಶ್ರೀಮತಿ ಅಶ್ವಿನಿ ಜಗತಾಪ ಅವರು ಸಂಘದ ಸದಸ್ಯರು ಮತ್ತು ಮಹಿಳೆಯರು ಜೀವನದಲ್ಲಿ ಆರ್ಥಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕೆಂದು ಎಲ್ಲರಿಗೂ ತಿಳಿಸಿದರು.

ಈ ಸಂದರ್ಭದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ರಾಜ್ಯಮಟ್ಟದ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ಶ್ರೀಮತಿ ನಾಗಮ್ಮ ಗಂಗನಕಟ್ಟಿ ಮತ್ತು ಕುಮಾರಿ ಸಿಂಚನಾ ಮಹೇಶ ಶಟವಾಜಿ, ಹಾಗೂ ರಾಜ್ಯಮಟ್ಟದ ಕುಸ್ತಿ ಪಟುಗಳು ವರಲಕ್ಷ್ಮೀ ಕದಡಿ, ಜಾಹ್ನವಿ ಬಸವರಾಜ ಕುರುಗೋಡ, ವೈಷ್ಣವಿ ವೀರಣ್ಣ ಇಮ್ಮಡಿಯವರ್, ಲಕ್ಷ್ಮೀ ವೀರಣ್ಣ ಇಮ್ಮಡಿಯವರ್, ಮತ್ತು ಮರಾಠಾ ಸಮಾಜದ ಹಿರಿಯರಾದ ಶ್ರೀಮತಿ ಸುಂದರಾಬಾಯಿ ಅವತಾಡೆ, ಶ್ರೀಮತಿ ಶಕುಂತಲಾ ಘಾಟಗೆ, ಶ್ರೀಮತಿ ಸುಶೀಲಾಬಾಯಿ ಶಿವಾಜಿರಾವ್ ಬೇಂದ್ರೆ, ಶ್ರೀಮತಿ ರುಕ್ಮಿಣಿಬಾಯಿ ಬಾಬರ್ ಇವರಿಗೆ ಸಮಾಜ ಸೇವೆಯಲ್ಲಿ ಕೊಡುಗೆ ಸಲ್ಲಿಸಿದ್ದಕ್ಕಾಗಿ ಸನ್ಮಾನ ಮಾಡಲಾಯಿತು.

ಈ ವೇಳೆ ಸಮಾಜದ ಹಲವಾರು ಮಹಿಳೆಯರು ಹಾಗೂ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಾಂಸ್ಕೃತಿಕ ವೈಭವವನ್ನು ಹೆಚ್ಚಿಸಿದರು.

# ಕನ್ನಡ ರಂಗಭೂಮಿಯ ಶಕ್ತಿಶಾಲಿ ಅಡಿಪಾಯ ಶಾಂತಕವಿಗಳು

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ರಂಗಭೂಮಿಯು ಆರಂಭಿಕ ಹಂತದಲ್ಲಿ ಸಂಪೂರ್ಣವಾಗಿ ಮರಾಠಿ ರಂಗಭೂಮಿಯ ಪ್ರಭಾವಕ್ಕೆ ಒಳಗಾದಾಗ ಕನ್ನಡ ನಾಟಕಗಳ ರಚನೆ ಮತ್ತು ಪ್ರಯೋಗವನ್ನು ಮಾಡುವುದರ ಮೂಲಕ ಕನ್ನಡ ರಂಗಭೂಮಿಯು ಗಟ್ಟಿತಳಹದಿಯನ್ನು ಒದಗಿಸಿಕೊಟ್ಟವರು ಶಾಂತಕವಿಗಳು ಎಂದೇ ಖ್ಯಾತರಾದ ಸಕ್ಕರಿ ಬಾಳಾಚಾರ್ಯರು. ಅವರನ್ನು ಕನ್ನಡ ರಂಗಪ್ರೇಮಿಗಳು ಎಂದಿಗೂ ಮರೆಯಬಾರದು ಎಂದು ಹಿರಿಯ ರಂಗನಿರ್ದೇಶಕ ಹಾಗೂ ನಾಟಕಕಾರ ಡಾ. ಪ್ರಕಾಶ ಗರುಡ ಹೇಳಿದರು.

ಬೆಟಗೇರಿಯ ರಾಜಪುರೋಹಿತರವರ ನಿವಾಸದಲ್ಲಿ ಸಾಹಿತ್ಯ ಕಲಾ ವೇದಿಕೆ ಹಾಗೂ ಧಾರವಾಡದ ಸಕ್ಕರಿ ಬಾಳಾಚಾರ್ಯ ಶಾಂತಕವಿ ಟ್ರಸ್ಟ್ ಸಹಯೋಗದಲ್ಲಿ ನಡೆದ ವಿಶ್ವರಂಗಭೂಮಿ ದಿನಾಚರಣೆಯ ನಿಮಿತ್ತ “ಶಾಂತಕವಿಗಳ ಸಾಹಿತ್ಯ ಮತ್ತು ಶ್ರೀವೀರನಾರಾಯಣ ಪ್ರಸಾದಿಕ ಕೃತಪುರ ನಾಟಕ ಮಂಡಳಿ” ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.



ಶಾಂತಕವಿಗಳು ಉಷಾಹರಣ ಸುಂದೋಪಸುಂದರ, ವಾತ್ಸಲ್ಯಹರಣದಂತಹ ಹಲವಾರು ನಾಟಕಗಳನ್ನು ರಚಿಸಿ, ನಿರ್ದೇಶಿಸಿ ಕೃತಪುರ ನಾಟಕ ಮಂಡಳಿ ಮೂಲಕ ಪ್ರಯೋಜಿಸಿ ಕನ್ನಡಿಗರಿಗೆ ನಾಟಕ ಅಭಿರುಚಿಯನ್ನು ಬೆಳೆಸಿದರು. ಕೀರ್ತನೆಗಳನ್ನು ರಚಿಸಿ, ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿ ಏಕೀಕರಣಕ್ಕೆ ಪ್ರೇರೇಪಣೆ ನೀಡಿದರು. ಕನ್ನಡ ರಂಗಭೂಮಿಗೆ ಅವರ ಕೊಡುಗೆ ಅನನ್ಯವಾಗಿದೆ ಎಂದರು.

ಮತ್ತೋರ್ವ ಅತಿಥಿ ಉಪನ್ಯಾಸಕರಾದ ಹಿರಿಯ ರಂಗಕರ್ಮಿಗಳಾದ ಧಾರವಾಡದ ಡಾ. ಶಶಿಧರ ನರೇಂದ್ರ “ವಿಶ್ವರಂಗಭೂಮಿ ದಿನಾಚರಣೆ ಮತ್ತು ಕನ್ನಡ ರಂಗಭೂಮಿ” ಕುರಿತು ವಿಶೇಷ ಉಪನ್ಯಾಸ ನೀಡಿ, ಇಂದು ಕನ್ನಡ ರಂಗಭೂಮಿ ಆತಂಕದ ಸ್ಥಿತಿಯಲ್ಲಿದೆ. ಮನುಷ್ಯನ ನಿಜವಾದ ಅಸ್ತಿತ್ವವನ್ನು ಅರಿತುಕೊಳ್ಳಲು ಮತ್ತು ಸಾಂಸ್ಕೃತಿಕ ಪರಂಪರೆ ಮತ್ತು ಶ್ರೀಮಂತಿಕೆಯನ್ನು ಮುಂದುವರೆಸಿಕೊಂಡು ಹೋಗಲು ವೃತ್ತಿ ಮತ್ತು ಹವ್ಯಾಸಿ ಎರಡೂ ಪ್ರಕಾರದ ರಂಗ ಚಟುವಟಿಕೆಗಳು ಜೀವಂತವಾಗಿರುವುದು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಯುವ ರಂಗನಿರ್ದೇಶಕರು ಉತ್ತಮ ನಾಟಕಗಳ ಪ್ರದರ್ಶನಕ್ಕೆ ಮುಂದಾಗಬೇಕೆಂದು ಸಲಹೆ ನೀಡಿದರು.

ಶಾಂತಕವಿಗಳ ಮರಿಮೊಮ್ಮಗ ಹಾಗೂ ಶಾಂತಕವಿ ಟ್ರಸ್ಟಿನ ಗೌರವ ಕಾರ್ಯದರ್ಶಿ ಹನುಮೇಶ ಸಕ್ಕರಿ ಹಾಗೂ ಹಿರಿಯ ರಂಗಕರ್ಮಿಗಳಾದ ಸುಶೀಲೇಂದ್ರ ಜೋಶಿ ಜ್ಯೋತಿ ಬೆಳಗಿಸಿ ಹಾಗೂ ಶಾಂತಕವಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಗೈದು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಮಾರಂಭದಲ್ಲಿ ಕೆ.ಆರ್. ಗುಡಿಹಾಳ, ಡಾ. ಸುಬ್ಬಣ್ಣನವರ, ಎಚ್.ಪಿ. ಸುಬ್ಬಣ್ಣನವರ, ವಾಣಿಶ್ರೀ ರಾಜಪುರೋಹಿತ, ಗಿರೀಶ ಪಂತರ, ಸುಮನ್ ಪಾಟೀಲ, ಚೈತನ್ಯ ಕುಲಕರ್ಣಿ, ಡಾ. ಜಿ.ಬಿ. ಪಾಟೀಲ, ಬಸವರಾಜ ನೇಲಜೇರಿ, ವಿ.ಆರ್. ಗುಡಿ, ವಿಶ್ವನಾಥ ಕುಲಕರ್ಣಿ, ವಿಶ್ವನಾಥ ಕಮ್ಮಾರ, ರತ್ನಾ ಪುರಂತರ, ವಿಶ್ವನಾಥ ಬೇಂದ್ರೆ, ಎಸ್.ಎಲ್. ಕುಲಕರ್ಣಿ ಸೇರಿದಂತೆ ಸಾಹಿತ್ಯ ಕಲಾ ವೇದಿಕೆಯ ಸದಸ್ಯರು ಹಾಗೂ ರಂಗಾಸಕ್ತರು ಪಾಲ್ಗೊಂಡಿದ್ದರು.


ಕರ್ನಾಟಕ ಸರ್ಕಾರ

**ಪುರಸಭೆ ಕಾರ್ಯಾಲಯ, ಗಜೇಂದ್ರಗಡ**

ಕ್ರಸಂ:ಪುಸಗ/ಆವಿ/ಎಸ್.ಬಿ.ಎಂ-2.0/ಐ.ಇ.ಸಿ/2025-26 ದಿನಾಂಕ:31-03-2026

**(ಅಲ್ಪಾವಧಿ ಟೆಂಡರ್ ಪ್ರಕಟಣೆ KPPP ಮೂಲಕ)**

ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ “KPPP” ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ ಸ್ವಚ್ಛ ಭಾರತ್ ಮಿಷನ್ (ನ) 2.0 ಯೋಜನೆಯಡಿ ಮಾಹಿತಿ ಶಿಕ್ಷಣ ಸಂವಹನ (ಐ.ಇ.ಅ) ಮತ್ತು ಸಾಮರ್ಥ್ಯಾಭಿವೃದ್ಧಿ (IEC) ಘಟಕಗಳನ್ನು ಅನುಷ್ಠಾನಗೊಳಿಸುವ ಕುರಿತು. **1)DMA/2025-26/IND/6098, ರೂ.4.62 ಲಕ್ಷಗಳ** ಕಾಮಗಾರಿಗಳ ಅನುಷ್ಠಾನಕ್ಕಾಗಿ KPPP ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. KPPP ದಾಖಲೆಗಳಿಗಾಗಿ https://kppp.karnataka.gov.in/ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1) KPPP ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 09-04-2026 ಸಾಯಂಕಾಲ 4:30ಗಂಟೆ**ಯ ವರೆಗೆ

2) ಟೆಂಡರ್‌ನ್ನು ತೆರೆಯುವ **ದಿನಾಂಕ: 13-04-2026ರಂದು ಸಮಯ ಸಂಜೆ 4:30.00 ಗಂಟೆ**ಗೆ.

ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ವೆಬ್‌ಸೈಟ್ .https://kppp.karnataka.gov.in/ ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. KPPP ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

**ಸಹಿ/-ಮುಖ್ಯಾಧಿಕಾರಿ** **ಸಹಿ/-ಆಡಳಿತಾಧಿಕಾರಿ**
**ಪುರಸಭೆ ಗಜೇಂದ್ರಗಡ** **ಪುರಸಭೆ ಗಜೇಂದ್ರಗಡ**

ವಾ.ಸಾ.ಇ/ಗದಗ/735/ದೇಶಪಾಂಡೆಪಬ್ಲಿಸಿಟಿ/2025-26


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka